## 2015 ಕ.ತೀ.ವ 575

## (ಧಾರವಾಡ ನ್ಯಾಯಪೀಠ)

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

## ಬಸವರಾಜ ಬಸವಣ್ಣೆಪ್ಪ ಪಟ್ಟಾಣ್ –ವಿರುದ್ಧ– ಕರ್ನಾಟಕ ಸರ್ಕಾರದ ಪರವಾಗಿ ಜಿಲ್ಲಾಧಿಕಾರಿ, ಬೆಳಗಾಂ ಮತ್ತು ಇತರರು*

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 100ರಡಿಯಲ್ಲಿ ನಿಯತ ಎರಡನೇ ಮೇಲ್ಮನವಿ.

ಮೇಲ್ಮನವಿದಾರರು ಹೂಡಿದ ದಾವೆಯನ್ನು ವಜಾಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ಮೊದಲನೇ ಮೇಲ್ಮನವಿ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ, ಆ ಮೇಲ್ಮನವಿಯೂ ಸಹ ವಜಾಗೊಂಡ ಸಂದರ್ಭದಲ್ಲಿ ಸದರಿ ನಿಯತ ಎರಡನೇ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

ಈ ಹಿಂದೆ ಮೇಲ್ಮನವಿದಾರನು ಆತನ ತಾಯಿಯ ಜೊತೆ ಎದುರುದಾರರ ವಿರುದ್ಧ ಹೂಡಿದ್ದ ದಾವೆಯು ವಜಾಗೊಂಡಿದ್ದು ಮತ್ತೆ ಅದೇ ವಸ್ತುಸ್ಥಿತಿಯ ಆಧಾರದ ಮೇಲೆ ಮೇಲ್ಮನವಿದಾರನು ದಾವೆಯನ್ನು ಹೂಡಿರುತ್ತಾನೆ. ಹಾಗೆಯೇ ದಾವೆಯನ್ನು ಹೂಡುವ ವ್ಯಾಜ್ಯಕಾರಣವು 1987ರಲ್ಲಿದ್ದು ದಾವೆಯು 1963ರ ಕಾಲಪರಿಮಿತಿ ಕಾಯಿದೆ ಅನುಚ್ಛೇದ 1958ರಡಿಯಲ್ಲಿ ವಜಾಗೊಳ್ಳಲು ಅರ್ಹವೆಂದು ಅಧಿವಿಚಾರಣಾ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಗಳನ್ನು ವಜಾಗೊಳಿಸಿದೆ.

---

*ಆರ್.ಎಸ್.ಎ. ಸಂ. 533/2004 (ಡಿಇಸಿ/ಐಎನ್‌ಜೆ) ಇದರೊಂದಿಗೆ ಇತರೆ, ದಿನಾಂಕ: 29ನೇ ಏಪ್ರಿಲ್, 2014.

*ಉಲ್ಲೇಖಿಸಲಾದ ಮೊಕದ್ದಮೆಗಳು* *ಪ್ಯಾರಾಗಳಲ್ಲಿ*

1. *ಎಐಆರ್ 1960 ಎಸ್.ಸಿ. 335*
   *ಶ್ರೀಮತಿ ರುಕ್ಮಬಾಯಿ -ವಿರುದ್ಧ- ಲಾಲ್ ಲಕ್ಷ್ಮಿನಾರಾಯಣ್*
   *ಹಾಗೂ ಇತರರು* *(ಉಲ್ಲೇ) 12*
2. *ಎಐಆರ್ 1930 ಪಿಸಿ 270*
   *ಮಾಸ್ಟರ್ ಬೋಲೋ -ವಿರುದ್ಧ- ಎಂ.ಟಿ. ಕೊಕ್ಲಾನ್* *(ಉಲ್ಲೇ) 12*
3. *(2011) 9 ಎಸ್‌ಸಿಸಿ 126*
   *ಖಾತ್ರಿ ಹೋಟೆಲುಗಳ ಖಾಸಗಿ ನಿಯಮಿತ ಹಾಗೂ*
   *ಮತ್ತೊಬ್ಬರು -ವಿರುದ್ಧ- ಭಾರತ ಒಕ್ಕೂಟ*
   *ಹಾಗೂ ಮತ್ತೊಬ್ಬರು* *(ಉಲ್ಲೇ) 13*

ಅಪೀಲುದಾರರ ಪರ : ಶ್ರೀ ವಿ.ಎಂ. ಶೀಲವಂತ್ - ವಕೀಲರು;
1 ಮತ್ತು 2ನೇ ಪ್ರತ್ಯಪೀಲುದಾರರ ಪರ : ಶ್ರೀ ಹೆಚ್.ಹನುಮಂತರಾಯಪ್ಪ-ಎ.ಜಿ.ಎ.,
9ನೇ ಪ್ರತ್ಯಪೀಲುದಾರರ ಪರ : ಶ್ರೀ ಜಗದೀಶ್ ಪಾಟೀಲ್ - ವಕೀಲರು,
3, 4, 5, 6, 7 ಮತ್ತು 8ನೇ ಪ್ರತ್ಯಪೀಲುದಾರರಿಗೆ ನೋಟೀಸು ಜಾರಿ ಮಾಡಲಾಗಿದೆ.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ**:

1. ಈ ಎಲ್ಲಾ ಅಪೀಲುಗಳಲ್ಲಿರುವ ಪಕ್ಷಕಾರರು ಒಂದೇ ತೆರನಾಗಿದ್ದು, ಕಾನೂನಿನ ಸಾಮಾನ್ಯ ಪ್ರಶ್ನೆಗಳಾಗಿವೆ ಹಾಗೂ ಈ ಎಲ್ಲಾ ಪ್ರಕರಣಗಳಲ್ಲಿ ಸಂಗತಿಗಳು ಒಳಗೊಂಡಿವೆ. ಇದಲ್ಲದೆ, ಈ ಎಲ್ಲಾ ಎರಡನೇ ಅಪೀಲುಗಳಿಗೆ ಆಧಾರವಾಗಿರುವ 133/95, 134/95, 135/95, 18/96, 19/96 ಹಾಗೂ 20/96 ಸಂಖ್ಯೆ ಹೊಂದಿರುವ ಮೂಲ ದಾವೆಗಳನ್ನು ಸಾಮಾನ್ಯ ಸಾಕ್ಷ್ಯವನ್ನು ದಾಖಲಿಸುವ ಮೂಲಕ ಮತ್ತು

ಸಾಮಾನ್ಯ ತೀರ್ಪಿನ ಮುಖಾಂತರ ವಿಲೆ ಮಾಡಲಾಗಿದೆ. ಆದ್ದರಿಂದ ಈ ಎಲ್ಲಾ ಅಪೀಲುಗಳನ್ನು ವಿಲೇ ಮಾಡಲು ಒಟ್ಟಿಗೆ ಕೈಗೆತ್ತಿಕೊಳ್ಳಲಾಗಿದೆ.

2. ಶ್ರೀ ಬಸವರಾಜ ಬಸವಣ್ಣೆಪ್ಪ ಪಟ್ಟಾಣ್ ಈ ಎಲ್ಲಾ ಮೊಕದ್ದಮೆಗಳ ಅಪೀಲುದಾರರಾಗಿದ್ದಾರೆ. ಅಪೀಲುದಾರನು, ಮೇಲೆ ಸೂಚಿಸಲಾದ ದಾವೆಗಳಲ್ಲಿ ವಾದಿಯಾಗಿದ್ದನು. ಮೇಲಿನ ದಾವೆಗಳನ್ನು, ದಿನಾಂಕ 20.07.2001ರ ಸಾಮಾನ್ಯ ತೀರ್ಪಿನ ಪ್ರಕಾರ ಪ್ರತಿಪಾದಿಸಿದ ನಂತರ ವಜಾಗೊಳಿಸಲಾಯಿತು. ಸದರಿ ಸಾಮಾನ್ಯ ತೀರ್ಪು ಹಾಗೂ ಡಿಕ್ರಿಯ ವಿರುದ್ಧ 23/2001 ರಿಂದ 28/2001ರವರೆಗಿನ ಆರ್.ಎ. ಸಂಖ್ಯೆಗಳಲ್ಲಿರುವ ನಿಯತ ಅಪೀಲುಗಳನ್ನು, ಸಿವಿಲ್ ಪ್ರಕ್ರಿಯಾ ಸಂಹಿತೆ (ಸಿ.ಪಿ.ಸಿ) ಯ 96ನೇ ಪ್ರಕರಣದ ಮೇರೆಗೆ ಅನುಕ್ರಮವಾಗಿ ರಾಮದುರ್ಗದಲ್ಲಿ ಆಸೀನರಾಗಿರುವ ಸಿವಿಲ್ ಜಡ್ಜ್ ನ್ಯಾಯಾಲಯ, (ಹಿರಿಯ ವಿಭಾಗ) ಸೌಂದತ್ತಿ ಮುಂದೆ ಹೂಡಲಾಗಿತ್ತು. ಈ ಎಲ್ಲಾ ಅಪೀಲುಗಳನ್ನು ಪ್ರತಿಪಾದನೆಯ ನಂತರ ವಜಾಗೊಳಿಸಲಾಗಿದೆ. ಆದ್ದರಿಂದ ಪ್ರಸ್ತುತ ಅಪೀಲುಗಳನ್ನು, 533/2004ರಿಂದ 538/2004ರವರೆಗಿನ ಆರ್.ಎಸ್.ಎ. ಸಂಖ್ಯೆಗಳಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಮೇರೆಗೆ ಸಲ್ಲಿಸಲಾಗಿದೆ. ಪ್ರಸ್ತುತ ಮೊಕದ್ದಮೆಗಳಲ್ಲಿರುವ ಅಪೀಲುದಾರನು ಸದರಿ ದಾವೆಗಳಲ್ಲಿ ವಾದಿಯಾಗಿದ್ದಾನೆ ಹಾಗೂ ಎದುರುದಾರರು, ಸದರಿ ದಾವೆಗಳಲ್ಲಿ ಪ್ರತಿವಾದಿಗಳಾಗಿದ್ದಾರೆ.

ವಾದಿಯು, ಕೆ. ಜುನಿಪೇಟೆ ಗ್ರಾಮ, ರಾಮದುರ್ಗ ತಾಲೂಕು, ಬೆಳಗಾವಿ ಜಿಲ್ಲೆಯ ನಿವೇಶನ ಸಂ. 37 ಹಾಗೂ 38ರಲ್ಲಿರುವ ಜಮೀನನ್ನು ಕಾನೂನುಬದ್ಧವಾಗಿ ಸ್ವಾಧೀನಪಡಿಸಿಕೊಂಡು ಅಧಿಭೋಗಿಸುತ್ತಿದ್ದೇನೆಂದು ತಿಳಿಸಿದ್ದಾನೆ. ಮೂಲತಃವಾಗಿ ಈ ಎರಡೂ ಜಮೀನುಗಳು ವಾದಿಯ ಹುಟ್ಟಿನ ತಂದೆಯಾದ ಪ್ರತಿವಾದಿ ಸಂ.3 ವೀರನಗೌಡ ಇವರಿಗೆ ಸೇರಿದ್ದವು. ವಾದಿ ಬಸವರಾಜನನ್ನು ದಿನಾಂಕ 29.05.1967ರಂದು ಮೂರನೇ ಪ್ರತಿವಾದಿ–ವೀರನಗೌಡನು ಪಾರವ್ವ ಎಂಬ ಹೆಸರಿನ ಒಬ್ಬ ಹೆಂಗಸಿಗೆ ದತ್ತು ನೀಡಿದ್ದನು. ಈ ಎರಡೂ ದಾವಾ ಸ್ವತ್ತುಗಳನ್ನು, ಬಸವರಾಜನ ದತ್ತು ತಾಯಿಯಾದ ಶ್ರೀಮತಿ ಪಾರವ್ವನ ಹೆಸರಿಗೆ ಮೂರನೇ ಪ್ರತಿವಾದಿಯಾದ ವೀರನಗೌಡನು 27,500/– ರೂ.ಗಳ ಒಟ್ಟು ಪ್ರತಿಫಲಕ್ಕೆ ದಿನಾಂಕ 01.06.1977ರಂದು ಕ್ರಯಪತ್ರ

ನೋಂದಣಿ ಮೂಲಕ ಮಾರಾಟ ಮಾಡಿದನು ಹಾಗೂ ಅದರ ಆಧಾರದ ಮೇಲೆ, ಎಂ.ಇ.ಸಂ. 387ರಲ್ಲಿ ಕಂದಾಯ ಪ್ರಾಧಿಕಾರಿಗಳು ಅವಳ ಹೆಸರನ್ನು ಖಾತಾದಾರಳೆಂದು ಸೇರಿಸಿದ್ದರು. ಸದರಿ ಪಾರವ್ವಳು, ಮೂರನೇ ಪ್ರತಿವಾದಿಯ ಅತ್ತೆಯಾಗಿದ್ದಾಳೆ.

3. ಪ್ರತಿವಾದಿ ಸಂ.3 ವೀರಣ್ಣಗೌಡನು, ರಾಮದುರ್ಗ ನಗರ ಸಹಕಾರಿ ಬ್ಯಾಂಕಿನಲ್ಲಿ ಉದ್ಯೋಗಿಯಾಗಿ ಕಾರ್ಯನಿರ್ವಹಿಸುತ್ತಿದ್ದನು. ಸಂಘದ ಲೆಕ್ಕದ ಲೆಕ್ಕ ಪರಿಶೋಧನೆಯನ್ನು ಮಾಡಿದ ನಂತರ, ಪ್ರತಿವಾದಿ ಸಂ.3, ಸದರಿ ಸಂಘದ ನಿಧಿಗಳನ್ನು ದುರುಪಯೋಗ ಮಾಡಿರುವನೆಂಬುದು ಕಂಡುಬಂತು. ಆದ್ದರಿಂದ ಪ್ರತಿವಾದಿ ಸಂ.3 ರಿಂದ ದುರ್ವಿನಿಯೋಗವಾದ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗಿತ್ತು. ತದನುಸಾರವಾಗಿ, ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಉಪಬಂಧಗಳ ಪ್ರಕಾರ ಸಹಕಾರಿ ಸಂಘಗಳ ಸಹಾಯಕ ರಿಜಿಸ್ಟ್ರಾರರ ಮುಂದೆ ಸಂಘದ ಆಡಳಿತಾಧಿಕಾರಿಗಳು ಪ್ರಕರಣಗಳನ್ನು ದಾಖಲು ಮಾಡಿದರು.

ಹಾಗೆಯೇ ಆರು ಐತೀರ್ಪುಗಳನ್ನು ಪ್ರತಿವಾದಿ ಸಂ.3ರ ವಿರುದ್ಧ ಹೊರಡಿಸಲಾಗಿತ್ತು. ಐತೀರ್ಪುಗಳ ವರದಿಗಳು ಹಾಗೂ ಸಂಬಂಧಿಸಿದ ದಾವೆಗಳು, ಅಪೀಲುಗಳು ಹಾಗೂ ನಿಯತ ಎರಡನೇ ಅಪೀಲುಗಳನ್ನು ಈ ಕೆಳಗೆ ಸೂಚಿಸಲಾಗಿದೆ:

| ಕ್ರ.ಸಂ. | ಆರ್.ಎಸ್.ಎ. ಸಂ. | ಆರ್.ಎ. ಸಂ. | ಓ.ಎಸ್. ಸಂ. | ಐತೀರ್ಪುಗಳ ಸಂಖ್ಯೆಗಳು ಹಾಗೂ ದಿನಾಂಕಗಳು |
|---|---|---|---|---|
| 1. | 533/2004 | 23/2001 | 133/1995 | ಎಬಿಎನ್-608/1/78 07.07.1979 |
| 2. | 534/2004 | 24/2001 | 134/1995 | ಎಬಿಎನ್-608/2/78 21.03.1979 |
| 3. | 535/2004 | 25/2001 | 135/1995 | ಎಬಿಎನ್-427/12/1977 14.11.1977 |
| 4. | 536/2004 | 26/2001 | 18/1996 | ಎಬಿಎನ್-105/7/1980 20.03.1980 |
| 5. | 537/2004 | 27/2001 | 19/1996 | ಎಬಿಎನ್-105/12/80 29.05.1980 |
| 6. | 538/2004 | 28/2001 | 20/1996 | ಎಬಿಎನ್-105/13/1980 29.05.1980 |

ಪ್ರತಿವಾದಿ ಸಂ.3ರಿಂದ ಬಾಕಿಯಿರುವ ಮೊತ್ತವನ್ನು ವಸೂಲಿ ಮಾಡುವ ಸಲುವಾಗಿ, ದಾವಾ ಅನುಸೂಚಿ ಸ್ವತ್ತುಗಳನ್ನು, ಪ್ರತಿವಾದಿ ಸಂ. 1 ಹಾಗೂ 2 ಇವರು ಹರಾಜನ್ನು ಕೋರಿದರು. ಹರಾಜನ್ನು ಕೂಗುವ ಮೊದಲು ಸ್ವತ್ತುಗಳನ್ನು, ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದ ಉಪಬಂಧಗಳ ಪ್ರಕಾರ ಜಫ್ತಿ ಮಾಡಲಾಗಿತ್ತು. ಬಹಿರಂಗ ನೋಟೀಸನ್ನು ಹೊರಡಿಸುವ ಮೂಲಕ ಮೂರನೇ ಪ್ರತಿವಾದಿಯಿಂದ ಬಾಕಿಯಿರುವ ಮೊತ್ತದ ಬಾಕಿಗಳನ್ನು ವಸೂಲಿ ಮಾಡಲು ಸ್ವತ್ತುಗಳನ್ನು ಮಾರಾಟ ಮಾಡಲು ಕೋರಿದ್ದರಿಂದ, ಪ್ರತಿವಾದಿ ಸಂ.3ರಿಂದ ಎರಡು ಜಮೀನನ್ನು ಖರೀದಿಸಿದ್ದ ಶ್ರೀಮತಿ ಪಾರವ್ವ ಮೂಲದಾವೆ ಸಂ. 80/1987ರಲ್ಲಿ ಶಾಶ್ವತ ನಿರ್ಬಂಧಕಾಜ್ಞೆಗಾಗಿ, ಆಗಿನ ರಾಮದುರ್ಗದ ಮುನ್ಸೀಫ್ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದು ಮಧ್ಯಂತರ ನಿರ್ಬಂಧಕಾಜ್ಞೆಯು ಮಂಜೂರಾಗಿತ್ತು. ದಿನಾಂಕ 26.01.1988ರಂದು ಪಾರವ್ವನು ಕೊನೆಯುಸಿರೆಳೆದಳು. 80/1987ರ ಸಂಖ್ಯೆ ಹೊಂದಿದ್ದ ದಾವೆಯನ್ನು ನಡೆಸದಿದ್ದುದರಿಂದ ದಿನಾಂಕ 21.03.1990ರ ತಪ್ಪಿನ ಕಾರಣದಿಂದ ಅದನ್ನು ವಜಾಗೊಳಿಸಲಾಗಿತ್ತು.

ದಿನಾಂಕ 12.12.1995 ಹಾಗೂ 13.01.1996ರಂದು, ಮೊತ್ತಗಳನ್ನು ವಸೂಲಿ ಮಾಡುವ ಸಲುವಾಗಿ ಮೊದಲ ಪ್ರತಿವಾದಿಯಿಂದ ಪ್ರತ್ಯೇಕ ಮೂರು ನೋಟೀಸುಗಳನ್ನು ಹೊರಡಿಸಲಾಯಿತು ಹಾಗೂ ಸ್ವತ್ತನ್ನು ಜಫ್ತಿಗೊಳಿಸಲಾಗಿತ್ತು. ಆದ್ದರಿಂದ, 133/95, 134/95, 135/95, 18/96, 19/96 ಹಾಗೂ 20/96ರ ಮೂಲದಾವೆ ಸಂಖ್ಯೆಯನ್ನು ಹೊಂದಿರುವ ಆರು ಪ್ರತ್ಯೇಕ ದಾವೆಗಳನ್ನು, ಬಸವರಾಜ್ ಪಟ್ಟಾಣ್ ಅವರು ರಾಮದುರ್ಗದಲ್ಲಿರುವ ಮುನ್ಸೀಫ್ ನ್ಯಾಯಾಲಯದಲ್ಲಿ ಹೂಡಿದ್ದರು.

ಅಧಿವಿಚಾರಣಾ ನ್ಯಾಯಾಲಯದಲ್ಲಿ ನಿರೂಪಿಸಲಾದಂತೆ ವಾದಿಯಾದ ಬಸವರಾಜ್‌ರ ವಾದ ಏನೆಂದರೆ, ಅವನು ದಾವಾ ಅನುಸೂಚಿ ಸ್ವತ್ತನ್ನು ಕಾನೂನುಬದ್ಧವಾಗಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದು, ಅನುಸೂಚಿ ಸ್ವತ್ತನ್ನು, ದಿನಾಂಕ 01.06.1997ರಂದು ತನ್ನನ್ನು ದತ್ತು ತೆಗೆದುಕೊಂಡ ತಾಯಿಯಾದ ಪಾರವ್ವನಿಗೆ

ಪ್ರತಿವಾದಿ ಸಂ.3 ಇವರು ಮಾರಾಟ ಮಾಡಿದ್ದರೆಂದು, ಹಾಗಾಗಿ ಅವಳು 27,500/– ರೂ.ಗಳ ಒಟ್ಟು ಪ್ರತಿಫಲಕ್ಕೆ ಅದನ್ನು ಖರೀದಿಸಿದ್ದು, ಅನುಸೂಚಿ ಸ್ವತ್ತುಗಳ ಮಾಲೀಕಳಾಗಿದ್ದಳೆಂಬುದಾಗಿದೆ. ಸದರಿ ಪಾರವ್ವನು, ಅವಳು ಸಾಯುವವರೆಗೆ ಅನುಸೂಚಿ ಸ್ವತ್ತುಗಳ ಖಾತಾದಾರಳು ಹಾಗೂ ಮಾಲೀಕಳಾಗಿರುವುದನ್ನು ಕಾನೂನುಬದ್ಧ ಸ್ವಾಧೀನತೆ ಹೊಂದಿದ್ದಳೆಂದು ನಿರೂಪಿಸಲಾಗಿತ್ತು. ವಾದಿ ಮಾತ್ರ, ಪಾರವ್ವನ ಕಾನೂನುಬದ್ಧ ವಾರಸುದಾರನಾಗಿದ್ದರಿಂದ, ಅವನು ಅವಳ ಆಸ್ತಿಪಾಸ್ತಿಯ ಉತ್ತರಾಧಿಕಾರಿಯಾಗಿರುವನು ಹಾಗೂ ಅವಳು ತೀರಿಕೊಂಡ ದಿನಾಂಕ 26.01.1987ರಿಂದ ಅನುಸೂಚಿ ಸ್ವತ್ತಿನ ಸ್ವಾಧೀನವನ್ನು ಹೊಂದಿರುತ್ತಾನೆ. ವಾದಿಯ ಪ್ರಕಾರ, ನೋಟೀಸಿನಲ್ಲಿ ಸೂಚಿಸಲಾದ ದಿನಾಂಕದಂದು ಅಥವಾ ಅದಕ್ಕೂ ಮೊದಲು ನೋಟೀಸಿನಲ್ಲಿ ಸೂಚಿಸಲಾದ ಮೊತ್ತವನ್ನು ಸಂದಾಯ ಮಾಡಲು 3ನೇ ಸಂ. ಪ್ರತಿವಾದಿಯು ವಿಫಲನಾಗಿದ್ದು, ಅವನು ದಾವಾ ಜಮೀನನ್ನು ಮಾರಿದ್ದು, ಪ್ರತಿವಾದಿ ಸಂ.2, ಸಹಕಾರಿ ಸಂಘಗಳ ಸಹಾಯಕ ರಿಜಿಸ್ಟ್ರಾರ್‌ರವರು 3ನೇ ಸಂಖ್ಯೆಯ ಪ್ರತಿವಾದಿಗೆ ನೋಟೀಸನ್ನು ಹೊರಡಿಸಿರುವುದನ್ನು ತಿಳಿದು ಆಘಾತವಾಗಿರುತ್ತದೆ. ಮೂರನೇ ಪ್ರತಿವಾದಿಗೆ ಹೊರಡಿಸಿದ ದಿನಾಂಕಗಳು ಹಾಗೂ ಅವುಗಳ ಸಂಖ್ಯೆಯನ್ನು ದಾವೆಗಳಲ್ಲಿ ಸೂಚಿಸಲಾಗಿದೆ. ವಾದಿಯು ಪ್ರಕಾರ ಸದರಿ ನೋಟೀಸು ಕಾನೂನುಬಾಹಿರವಾದದು ಹಾಗೂ ಅಸಿಂಧುವಾದುದಾಗಿದೆ ಹಾಗೂ ಅದನ್ನು ಯಾವುದೇ ಎಚ್ಚರಿಕೆ ನೀಡದೆ ಹೊರಡಿಸಲಾಗಿದೆ. ಅವನು ಸ್ವತ್ತನ್ನು ಸ್ವಾಧೀನಪಡಿಸಿಕೊಂಡ ಏಕೈಕ ಮಾಲೀಕನಾಗಿರುವುದರಿಂದ ಅನುಸೂಚಿ ಜಮೀನನ್ನು ಜಫ್ತಿ ಮಾಡುವುದಕ್ಕಾಗಲಿ ಅಥವಾ ಮಾರಾಟ ಮಾಡುವುದಕ್ಕಾಗಲಿ ಸಾಧ್ಯವಿಲ್ಲವೆಂಬುದು ಹಾಗೂ ಸಹಕಾರ ಸಂಘಗಳ ಸಹಾಯಕ ರಿಜಿಸ್ಟ್ರಾರ್‌ರವರು ತೀರ್ಪುಗಳನ್ನು ಹೊರಡಿಸುವ ಮೊದಲೇ ಕ್ರಯಪತ್ರವನ್ನು ಮಾಡಲಾಗಿತ್ತೆಂಬುದು ವಾದಿಯ ವಾದವಾಗಿದೆ. ಪ್ರತಿವಾದಿ ಸಂ.3ಕ್ಕೆ ನೋಟೀಸನ್ನು ಹೊರಡಿಸಿದ್ದಾಗ ದಾವೆಯ ವ್ಯಾಜ್ಯ ಕಾರಣವು ಉದ್ಭವವಾಗಿದೆಯೆಂದು ಹಾಗೂ ಅದು ತನ್ನ ಗಮನಕ್ಕೆ ಬಂತೆಂದು ನಿರೂಪಿಸಲಾಗಿದೆ. ಎಲ್ಲಾ ದಾವೆಗಳಲ್ಲಿ ಕೋರಿರುವ ಮನವಿ ಈ ಮುಂದಿನಂತಿದೆ :

ದಾವಾ ಜಮೀನನ್ನು, ಜಫ್ತಿಗೆ ಹಾಗೂ ಮಾರಾಟಕ್ಕೆ ಅಥವಾ ಮಧ್ಯಸ್ಥದಾರರು ಹೊರಡಿಸಿದ ತೀರ್ಪಿನ ಪ್ರಕಾರ ಮೊತ್ತವನ್ನು ವಸೂಲಿ ಮಾಡುವುದಕ್ಕೆ ಸಂಬಂಧಿಸಿದ ವ್ಯವಹರಣೆಗಳಲ್ಲಿ ಮಾರಾಟ ಮಾಡುವುದಕ್ಕೆ ಹಾಗೂ ಪ್ರತಿವಾದಿ ಸಂ.1 ಹಾಗೂ 2 ರಿಂದ 3ರವರೆಗಿನ ಪ್ರತಿವಾದಿಗಳಿಂದ ಬಾಕಿಯಿರುವ ಮೊತ್ತದ ವಸೂಲಿ ಮಾಡುವ ಸಂಬಂಧದಲ್ಲಿ ಸ್ವತ್ತುಗಳನ್ನು ಜಪ್ತಿ ಮಾಡುವ ಮೂಲಕವಾಗಲಿ ತಾನೇ ಅಥವಾ ತನ್ನ ಅಧೀನ ವ್ಯಕ್ತಿಗಳ ಮೂಲಕ ದಾವಾ ಜಮೀನನ್ನು ಮಾರಾಟ ಮಾಡುವ ಮೂಲಕವಾಗಲೀ 2ನೇ ಪ್ರತಿವಾದಿಯ ವಿರುದ್ಧ ಆನುಷಂಗಿಕ, ಸಾರ್ವಕಾಲಿಕ ಶಾಶ್ವತ ನಿರ್ಬಂಧಕಾಜ್ಞೆಯನ್ನು ಹೊರಡಿಸುವುದಕ್ಕೆ ಹೊಣೆ ಯಾಗುವುದಿಲ್ಲವೆಂದು ಘೋಷಿಸುವುದು.

ಎಲ್ಲಾ ಮಾಹಿತಿ ದೃಢೋಕ್ತಿಗಳನ್ನು ನಿರಾಕರಿಸಿರುವ ಪ್ರತಿವಾದಿ ಸಂ.1 ಹಾಗೂ 2 ಇವರು ಸದರಿ ದಾವೆಗಳನ್ನು ವಿರೋಧಿಸಿರುತ್ತಾರೆ. ಪ್ರತಿವಾದಿಗಳ ಪ್ರಕಾರ ದಾವೆಯ ಸ್ವರೂಪದಲ್ಲಿ ಪಿತೂರಿಯಿರುವುದು ತೋರುತ್ತದೆ ಹಾಗೂ ನೋಂದಾಯಿತ ಕ್ರಯಪತ್ರದ ಮೂಲಕ ಮೃತ ಪಾರವ್ವನ ಹೆಸರಿಗೆ ಪ್ರತಿವಾದಿ ಸಂ.3 ಹಾಗೆ ಮಾಡಿದ ಪರಭಾರೆಯು, 1 ಹಾಗೂ 2ನೇ ಸಂಖ್ಯೆಯ ಪ್ರತಿವಾದಿಗಳು ಮೂರನೇ ಪ್ರತಿವಾದಿಯಿಂದ ಮೊತ್ತವನ್ನು ವಸೂಲಿ ಮಾಡುವುದನ್ನು ತಪ್ಪಿಸಲು ತುಂಬಾ ನಿರ್ದಿಷ್ಟವಾಗಿ ಮೋಸದಿಂದ ಕೂಡಿರುವುದು ತೋರುತ್ತದೆ. ದಾವೆಯು ಪೂರ್ವನ್ಯಾಯದ ತತ್ವಗಳನ್ನು ಪ್ರತಿಬಂಧಿಸುವುದು ಹಾಗೂ ಸಿವಿಲ್ ಪ್ರಕ್ರಿಯಾ ಸಂಹಿತೆಯ 2ನೇ ನಿಯಮದ 2ನೇ ಆದೇಶದ ಉಪಬಂಧಗಳನ್ನು ಪ್ರತಿಬಂಧಿಸುತ್ತದೆಂಬುದನ್ನು ತೋರಿಸುತ್ತದೆ. ದಾವೆಯು, ಕರ್ನಾಟಕ ಸಹಕಾರ ಸಂಘಗಳ 125ನೇ ಪ್ರಕರಣದ ಪ್ರಕಾರ ನೋಟೀಸನ್ನು ಹೊರಡಿಸದಿರುವುದಕ್ಕೆ ನಿರ್ವಹಿಸಲಾಗುವುದಿಲ್ಲವೆಂಬುದನ್ನು ಹಾಗೂ ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ ಉಪಬಂಧಗಳ ಮೇರೆಗೆ ಹೊರಡಿಸಲಾದ ತೀರ್ಪನ್ನು ಪ್ರಶ್ನಿಸುವ ಅಧಿಕಾರ ವ್ಯಾಪ್ತಿಯನ್ನು ಸಿವಿಲ್ ನ್ಯಾಯಾಲಯವು ಹೊಂದಿಲ್ಲವೆಂಬುದನ್ನು ತೋರಿಸುತ್ತದೆ. ಆರೋಪಿಸಲಾದ ವ್ಯಾಜ್ಯ ಕಾರಣವು

ಕಲ್ಪನಾಯುಕ್ತವಾಗಿದೆಯೆಂಬುದನ್ನು ತೋರಿಸುತ್ತದೆ. ಅನುಸೂಚಿ ಸ್ವತ್ತಿನ ಸ್ವಾಧೀನವನ್ನು ಹೊಂದಿರುವನೆಂದು ತೋರಿಸಲಾಗಿರುವ 3ನೇ ಸಂಖ್ಯೆಯ ಪ್ರತಿವಾದಿಯಿಂದ ದುರುಪಯೋಗಗೊಂಡ ಮೊತ್ತವನ್ನು ವಸೂಲಿ ಮಾಡುವುದರಿಂದ 1ನೇ ಹಾಗೂ 2ನೇ ಪ್ರತಿವಾದಿಯುನ್ನು ತಡೆಯುವ ಸಲುವಾಗಿ ಪ್ರಸ್ತುತ ದಾವೆಗಳನ್ನು ಹೂಡಲಾಗಿದೆಯೆಂಬುದು ಮತ್ತೆ ದೃಢವಾಗುತ್ತದೆ. ಮೂಲದಾವೆ ಸಂ. 80/1987ರ ಕಾರಣದಿಂದ ಪ್ರಸ್ತುತ ದಾವೆಗಳಿಗೆ ಅಡಚಣೆ ಮಾಡುವ ತತ್ವಗಳು ಅನ್ವಯವಾಗುತ್ತಿದ್ದು ಅದು ದೃಢವಾಗಿದೆ. ದಾವೆಗಳನ್ನು ಕಾಲದೊಳಗೆ ಪ್ರತಿಷೇಧಿಸಲಾಗುತ್ತದೆಂಬುದನ್ನು ತಿಳಿಸುತ್ತದೆ.

ಮೃತ ಪಾರವ್ವನು, ಮೂರನೇ ಪ್ರತಿವಾದಿಯ ಅತ್ತೆಯಲ್ಲದೆ ಬೇರೆ ಯಾರೂ ಅಲ್ಲ. ಆದುದರಿಂದ ಮೂಲ ದಾವೆ ಸಂ. 80/1987ನ್ನು ಹೊಂದಿರುವ ದಾವೆ ಹಾಗೂ ಪ್ರಸ್ತುತ ದಾವೆಗಳು ಸ್ವರೂಪದಲ್ಲಿ ಪಿತೂರಿಯಿಂದ ಕೂಡಿರುವಂಥವು ಹಾಗೂ ದಾವೆಗಳನ್ನು ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959ರ 32 ಹಾಗೂ 33ನೇ ಪ್ರಕರಣಗಳ ಉಪಬಂಧಗಳ ದೃಷ್ಟಿಯಿಂದ ನಿರ್ವಹಿಸಲಾಗುವುದಿಲ್ಲವೆಂಬುದು ಮತ್ತೆ ದೃಢವಾಗುತ್ತದೆ. ಪ್ರತಿವಾದಿಗಳ ಪ್ರಕಾರ, ಸಿವಿಲ್ ನ್ಯಾಯಾಲಯಗಳು, ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮದ 101(2)ನೇ ಪ್ರಕರಣದ ಪ್ರಕಾರ ದೃಢೋಕ್ತಿಗಳನ್ನು ಪ್ರಶ್ನಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ದಾವೆಗಳನ್ನು, 118(3)ನೇ ಪ್ರಕರಣದ ಉಪಬಂಧಗಳ ಮೂಲಕ ಪ್ರತಿಷೇಧಿಸಲಾಗಿದೆಯೆಂಬುದನ್ನು ಸಹ ತಿಳಿಸುತ್ತದೆ.

4. ಮೇಲಿನ ವಾದ-ವಿವಾದಗಳ ಆಧಾರದ ಮೇಲೆ ಅಧಿವಿಚಾರಣಾ ನ್ಯಾಯಾಲಯವು ಈ ಮುಂದಿನ ಅಂಶಗಳನ್ನು ರೂಪಿಸಿದೆ :

**ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ಅಂಶ ಸಂ. 1**

1. ವಾದಿಯು, ತಾನು ದಾವಾ ಸ್ವತ್ತಿನ ಒಡೆಯನಾಗಿರುವುದನ್ನು ಸಾಬೀತುಪಡಿಸಿದ್ದಾನೆಯೇ?

**ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ಅಂಶ ಸಂ. 2**

2. ವಾದಿಯು, ತಾನು ದಾವಾ ಜಮೀನನ್ನು ಸ್ವಾಧೀನಪಡಿಸಿಕೊಂಡು ಅನುಭವಿಸುತ್ತಿರುವುದನ್ನು ರುಜುವಾತುಪಡಿಸಿದ್ದಾನೆಯೇ?

**ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ಅಂಶ ಸಂ. 3**

3. ವಾದಿಯು, ತಾನು ದಿವಂಗತ ಶ್ರೀಮತಿ ಪಾರವ್ವ ಕೋಂ ಬಸವಣ್ಣೆಪ್ಪ ಪಟ್ಟಾಣ್‌ರವರ ದತ್ತು ಪುತ್ರನಾಗಿರುವುದನ್ನು ರುಜುವಾತು ಪಡಿಸಿದ್ದಾನೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 4**

4. ಪ್ರತಿವಾದಿ ಸಂ. 3 ಇವರು, 1.6.1977ರಂದು ನೋಂದಾಯಿತ ಮಾರಾಟ ಕ್ರಯಪತ್ರದ ಮೇರೆಗೆ ಶ್ರೀಮತಿ ಪಾರವ್ವ ಕೋಂ ಬಸವಣ್ಣೆಪ್ಪ ಪಟ್ಟಾಣ್‌ರವರಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುವುದನ್ನು ವಾದಿಯು ರುಜುವಾತುಪಡಿಸಿದ್ದಾನೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 5**

5. ಪ್ರತಿವಾದಿಗಳು, 3ನೇ ಸಂಖ್ಯೆಯ ಪ್ರತಿವಾದಿ ಹಾಗೂ ಶ್ರೀಮತಿ ಪಾರವ್ವ ಕೋಂ ಬಸವಣ್ಣೆಪ್ಪ ಪಟ್ಟಾಣ್‌ರವರ ನಡುವೆ ನಡೆದ ದಿನಾಂಕ 1.6.1977ರ ಕ್ರಯಪತ್ರವು ಕಾನೂನುಬಾಹಿರ ಹಾಗೂ ಶೂನ್ಯವಾದು ದೆಂಬುದನ್ನು ರುಜುವಾತುಪಡಿಸಿದ್ದಾರೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 6**

6. ವಾದಿಯು, ಡೈರಿ ಸಂ.265ರ ಪ್ರಕಾರ ದಾವಾ ಜಮೀನುಗಳ ಹಕ್ಕುಗಳ ದಾಖಲೆಯಲ್ಲಿರುವ ನಮೂದು ಕಾನೂನುಬಾಹಿರವಾದುದೆಂಬುದು. ಜಾರಿಗೊಳಿಸಿಲ್ಲದಿರುವುದು ಹಾಗೂ ವಾದಿ ಬದ್ಧವಾಗಿಲ್ಲವೆಂಬುದನ್ನು ಸಾಬೀತುಪಡಿಸಿದ್ದಾನೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 7**

7. ದಾವೆಯನ್ನು ನಿರ್ವಹಿಸಲಾಗಿದೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 8**

8. ಈ ನ್ಯಾಯಾಲಯವು, ಈ ದಾವೆಯ ಅಧಿವಿಚಾರಣೆ ನಡೆಸುವ ಅಧಿಕಾರ ವ್ಯಾಪ್ತಿ ಹೊಂದಿದೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 9**

9. ಈ ನ್ಯಾಯಾಲಯವು, ಈ ದಾವೆಯ ಅಧಿವಿಚಾರಣೆ ನಡೆಸುವ ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿ ಹೊಂದಿದೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 10**

10. ವಾದಿಯು, ಆಪಾದಿಸಲಾದ ವ್ಯಾಜ್ಯ ಕಾರಣವನ್ನು ರುಜುವಾತು ಪಡಿಸಿದ್ದಾನೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 11**

11. ದಾವೆಯನ್ನು ಪರಿಮಿತಿಯಿಂದ ತಡೆಯಲಾಗಿದೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 12**

12. ದಾವೆಯನ್ನು ವಿಬಂಧದ ತತ್ವಗಳಿಂದ ತಡೆಯಲಾಗಿದೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 13**

13. ವಾದಿಯು ಘೋಷಣಾತ್ಮಕ ಪರಿಹಾರಕ್ಕೆ ಹಕ್ಕುಳ್ಳವನಾಗಿದ್ದಾನೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 14**

14. ವಾದಿಯು ಕೋರಲಾದಂತೆ ಶಾಶ್ವತ ನಿರ್ಬಂಧಕಾಜ್ಞೆಯ ಪರಿಹಾರಕ್ಕೆ ಹಕ್ಕುಳ್ಳವನಾಗಿದ್ದಾನೆಯೇ?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 15**

15. ವಾದಿಯು ಯಾವ ಪರಿಹಾರಗಳಿಗೆ ಹಕ್ಕುಳ್ಳವನಾಗಿರುವನು?

**ಮೂಲದಾವೆ ಸಂ. 133/95, 134/95, 135/95, 18/96 ಹಾಗೂ 20/96ರಲ್ಲಿರುವ ಅಂಶ ಸಂ. 16**

16. ಆದೇಶ ಅಥವಾ ಡಿಕ್ರಿ ಯಾವುದು?

5. ವಾದಿ ಬಸವರಾಜನನ್ನು ಪ್ರಾಥಮಿಕ ಸಾಕ್ಷ್ಯ–1 ಎಂದು ಪರಿಶೀಲಿಸಲಾಗಿದೆ ಹಾಗೂ ಶಿವಪುತ್ರಪ್ಪ, ಸಹಕಾರಿ ಸಂಘಗಳ ಸಹಾಯಕ ರಿಜಿಸ್ಟ್ರಾರ್‌ನನ್ನು ಪ್ರತಿವಾದಿ

ಸಾಕ್ಷ್ಯ–1 ಎಂದು ಪರಿಶೀಲಿಸಲಾಗಿದೆ. 28 ನಿಶಾನೆಗಳನ್ನು ವಾದಿಯ ಪರವಾಗಿ ಗುರುತು ಮಾಡಿಕೊಳ್ಳಲಾಗಿದೆ ಹಾಗೂ ಐದು ನಿಶಾನೆಗಳನ್ನು ಪ್ರತಿವಾದಿ ಸಂ. ಹಾಗೂ 2ರ ಪರವಾಗಿ ಗುರುತು ಹಾಕಿಕೊಳ್ಳಲಾಗಿದೆ. ಮೂರನೇ ಪ್ರತಿವಾದಿಯನ್ನು ಯಾವುದೇ ಲಿಖಿತ ಹೇಳಿಕೆ ನೀಡಲು ಆಯ್ಕೆ ಮಾಡಿಕೊಂಡಿರುವುದಿಲ್ಲ. ಅಂತಿಮವಾಗಿ, ಅಧಿವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಮೂರ್ತಿಗಳು, ಈ ದಾವೆಗಳಲ್ಲಿ ಹಾಗೆ ರೂಪಿಸಲಾದ ವಿವಾದಾಂಶಗಳಿಗೆ, ಅಧಿವಿಚಾರಣಾ ನ್ಯಾಯಾಲಯದ ತೀರ್ಪಿನ 30 ಹಾಗೂ 31ನೇ ಸಂಖ್ಯೆಗಳ ಪುಟಗಳಲ್ಲಿ ಕಂಡುಬಂದಿರುವ ಹಾಗೆ ಉತ್ತರಿಸಲಾಗಿದೆ:

| | |
|---|---|
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 1 | ಸಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 2 | ಸಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 3 | ಸಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 4 | ಸಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 5 | ನಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 6 | ಸಕಾರಾತ್ಮಕವಾಗಿ |

| | |
|---|---|
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 7 | ನಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 8 | ನಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 9 | ಸಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 10 | ನಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 11 | ಸಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 12 | ಸಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 13 | ನಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 14 | ನಕಾರಾತ್ಮಕವಾಗಿ |
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 15 | ನಕಾರಾತ್ಮಕವಾಗಿ |

| | |
|---|---|
| ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಲ್ಲಿರುವ ವಿವಾದಾಂಶ ಸಂ. 16 | ಅಂತಿಮ ಆದೇಶದ ಪ್ರಕಾರ |

6. ಈ ಎಲ್ಲಾ ದಾವೆಗಳಲ್ಲಿ ಅದನ್ನು ಒಟ್ಟುಗೂಡಿಸುವ ಮೂಲಕ ಹೊರಡಿಸಲಾದ ಸದರಿ ಸಾಮಾನ್ಯ ತೀರ್ಪು ಹಾಗೂ ಡಿಕ್ರಿಯ ವಿರುದ್ಧ ಪ್ರತ್ಯೇಕ ಅಪೀಲುಗಳನ್ನು ಅನುಕ್ರಮವಾಗಿ ಮೂಲದಾವೆ ಸಂ. 133/95, 134/95, 135/95, 18/96, 19/96 ಹಾಗೂ 20/96ರಿಂದ ಆದ 23/2001 ರಿಂದ 28/2001ರವರೆಗಿನ ಆರ್.ಎ.ಸಂಖ್ಯೆಗಳಲ್ಲಿ ರಾಮದುರ್ಗದಲ್ಲಿ ಉಪವೇಶನದಲ್ಲಿದ್ದ ಸೌಂದತ್ತಿಯ ಸಿವಿಲ್ ನ್ಯಾಯಾಧೀಶರ (ಹಿರಿಯ ವಿಭಾಗ) ಮುಂದೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಬೇಕಾಯಿತು. ಕೆಲವು ಆಧಾರಗಳನ್ನು ಅಪೀಲುಗಳಲ್ಲಿ ಕೋರಲಾಯಿತು. ವಾದಗಳನ್ನು ಆಲಿಸಿದ ನಂತರ ದಾಖಲೆಗಳನ್ನು ಅವಲೋಕಿಸಿ, ಮೊದಲ ಅಪೀಲು ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು, ಪ್ರಶ್ನಿತ ಸಾಮಾನ್ಯ ತೀರ್ಪಿನ 12 ಹಾಗೂ 13ನೇ ಸಂಖ್ಯೆಯ ಪುಟಗಳಲ್ಲಿ ಕಂಡುಬರುವಂತೆ ಪರಿಗಣನೆಗಾಗಿ ಐದು ಅಂಶಗಳನ್ನು ಆಧರಿಸಿ ರಚಿಸುವ ಮೂಲಕ ಸಾಮಾನ್ಯ ತೀರ್ಪಿನ ಮೂಲಕ ಈ ಎಲ್ಲಾ ಅಪೀಲುಗಳನ್ನು ವಜಾಗೊಳಿಸಲಾಗಿದೆ.

1) ಅಪೀಲುದಾರನು ಈ ವಿಷಯದಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 27(12)(ಬಿ) ನಿಯಮದ 41ನೇ ಆದೇಶದ ಮೇರೆಗೆ ಹೆಚ್ಚುವರಿ ಸಾಕ್ಷಿಯನ್ನು ಹಾಜರುಪಡಿಸಲು ಯುಕ್ತ ಆಧಾರಗಳನ್ನು ರೂಪಿಸಿದ್ದಾನೆಯೇ?

2) ಅಪೀಲಿನ ಮೇರೆಗಿನ ತೀರ್ಪು ಹಾಗೂ ಡಿಕ್ರಿ ದಾಖಲೆಯಲ್ಲಿರುವ ಕಾನೂನು ಹಾಗೂ ಸಾಕ್ಷಿಗೆ ವಿರುದ್ಧವಾಗಿದೆಯೇ?

3) ಅಪೀಲಿನ ಮೇರೆಗಿನ ತೀರ್ಪು ಹಾಗೂ ಡಿಕ್ರಿಯಲ್ಲಿ ಹಸ್ತಕ್ಷೇಪ ಮಾಡಲು ಈ ನ್ಯಾಯಾಲಯಕ್ಕೆ ಯಾವುದೇ ಆಧಾರಗಳು ಇವೆಯೇ?

4) ವಾದಿಯು ಕೋರಲಾದಂತೆ ಘೋಷಣೆಯು ಪರಿಹಾರಕ್ಕೆ ಹಕ್ಕುಳ್ಳವನಾಗಿದ್ದಾನೆಯೇ?

5) ಡಿಕ್ರಿ ಅಥವಾ ಆದೇಶ ಯಾವುದು?

ಮೊದಲ ಎಲ್ಲಾ ನಾಲ್ಕೂ ಅಂಶಗಳಿಗೆ ನಕಾರಾತ್ಮಕವಾಗಿ ಉತ್ತರಿಸಲಾಗಿದೆ. ಹಾಗೂ ಅಂತಿಮವಾಗಿ ಅಪೀಲುಗಳನ್ನು ವಜಾಗೊಳಿಸಲಾಗಿದೆ.

7. ಈ ಎಲ್ಲಾ ಅಪೀಲುಗಳನ್ನು, ಮಾನ್ಯ ನನ್ನ ಹಿಂದಿನವರು ದಿನಾಂಕ 17.06.2004ರಂದು ರೂಪಿಸಲಾದ ಕಾನೂನಿನ ಸಾಮಾನ್ಯ ಗಣನೀಯ ಪ್ರಶ್ನೆಗಳಿಗನುಸಾರವಾಗಿ ಪರಿಗಣಿಸಲು ಒಪ್ಪಿಕೊಳ್ಳಲಾಗಿದೆ.

"1) ಅಧೀನ ನ್ಯಾಯಾಲಯಗಳು, ವಾದಿಯ ವಾದಗಳ ಪ್ರಕಾರ 1995ನೇ ವರ್ಷದಲ್ಲಿ ವಾದಿಯು ವ್ಯಾಜ್ಯ ಕಾರಣವನ್ನು ಎತ್ತಿದಾಗ, ಪರಿಮಿತಿ ಅಧಿನಿಯಮ, 1963ರ 58ನೇ ಅನುಚ್ಛೇದದ ಮೇರೆಗೆ ನಿಯಮಿಸಲಾದಂತೆ ಪರಿಮಿತಿಯ ಆಧಾರಗಳ ಆಧಾರದ ಮೇಲೆ ದಾವೆಯನ್ನು ವಜಾಗೊಳಿಸುವುದನ್ನು ಸಮರ್ಥಿಸಿಕೊಳ್ಳಲಾಗಿದೆಯೇ?

2) ದಾವಾ ಅನುಸೂಚಿ ಸ್ವತ್ತಿನ ಸಂಬಂಧದಲ್ಲಿ ಹೊರಡಿಸಿದ ಜಪ್ತಿ ನೋಟೀಸಿನ ಆಧಾರದ ಮೇಲೆ 1987ನೇ ವರ್ಷದಲ್ಲಿ ವಾದಿಯನ್ನು ದತ್ತುಪಡೆದ ತಾಯಿಯು ಸಂಬಂಧದಲ್ಲಿ ವ್ಯಾಜ್ಯಕಾರಣವು ಉಂಟಾಗಿದೆಯೆಂದು ಸದರಿ ಜಪ್ತಿ ಆದೇಶವು 1995ನೇ ವರ್ಷದ ಅವಧಿಯವರೆಗೆ ಕಾನೂನಿನಲ್ಲಿ ಮುಂದುವರಿಸಲಾಗಿದೆಯೆಂದು

> ಹಾಗೂ ಆದ್ದರಿಂದ, 1987ನೇ ವರ್ಷದಲ್ಲಿ ವಾದಿಯು ದಾವೆ ಹೂಡುವ ಹಕ್ಕನ್ನು ಪಡೆದುಕೊಂಡನೆಂದು ಹಾಗೂ ದಾವೆಗಳನ್ನು ಪರಿಮಿತಿಯ ಮೂಲಕ ನಿಷೇಧಿಸಲಾಯಿತೆಂದು ಅಧೀನ ನ್ಯಾಯಾಲಯಗಳು ಅಭಿಪ್ರಾಯಪಟ್ಟಿರುವುದು ಸರಿಯಾಗಿದೆಯೇ? ಹಾಗೂ ಎಐಆರ್ 1961 ಎಸ್.ಸಿ. 808ರಲ್ಲಿ ಹಾಗೂ ಎಐಆರ್ 1960 ಎಸ್.ಸಿ. 350 ಹಾಗೂ ಎಐಆರ್ 1930 ಪ್ರೀವಿ ಕೌನ್ಸಿಲ್ 270ರಲ್ಲಿ ವರದಿಯಾದ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳಲ್ಲಿ ನಿರೂಪಿಸಲಾದ ಕಾನೂನಿಗೆ ಈ ನಿರ್ಣಯುಗಳು ಹಾಗೂ ಕಾರಣಗಳು, ಅನುರೂಪವಾಗಿವೆಯೇ, ಇದರಲ್ಲಿ ಯಾವಾಗ ದಾವೆ ಹೂಡುವ ಹಕ್ಕಿನ ದಾಳಿ ಪ್ರಾಪ್ತವಾಯಿತೆಂಬ ಬಗ್ಗೆ ಅಭಿಪ್ರಾಯ ವ್ಯಕ್ತಪಡಲಾಗಿದೆ ಹಾಗೂ ವ್ಯಾಜ್ಯ ಕಾರಣದಿಂದ ವಾದಪತ್ರದಲ್ಲಿ ವಿವರಿಸಲಾದಂತೆ ಘೋಷಣಾತ್ಮಕ ದಾವೆಯನ್ನು ಹೂಡಲು ಅವನನ್ನು ಹೊಣೆಯಾಗಿ ಮಾಡಿರುವ ದಾವಾಸ್ವತ್ತಿಗೆ ವಾದಿಯ ಹಕ್ಕನ್ನು ನಿರಾಕರಿಸುವ ಸಂಬಂಧದಲ್ಲಿ ಜಫ್ತಿ ಆದೇಶವನ್ನು ಹೊರಡಿಸಲಾಗಿದೆಯೇ?"

8. ಅಪೀಲುದಾರನ ಪರವಾದ ಮಾನ್ಯ ವಕೀಲರು ತಮ್ಮ ಸುದೀರ್ಘವಾದ ವಾದವನ್ನು ಮಂಡಿಸಿದ್ದಾರೆ. 1 ಹಾಗೂ 2ನೇ ಸಂಖ್ಯೆಯ ಪ್ರತಿವಾದಿಗಳ ಪರವಾಗಿ ಹಾಜರಾಗಿರುವ ಮಾನ್ಯ ಸರ್ಕಾರಿ ವಕೀಲರು ಎಂದರೆ ಜಿಲ್ಲಾಧಿಕಾರಿ, ಬೆಳಗಾವಿ ಹಾಗೂ ಸಹಕಾರಿ ಸಂಘಗಳ ಸಹಾಯಕ ರಿಜಿಸ್ಟ್ರಾರ್, ಬೈಲಹೊಂಗಲ ಜಿಲ್ಲೆ, ಬೆಳಗಾವಿ ಇವರು ಅಧಿವಿಚಾರಣಾ ನ್ಯಾಯಾಲಯ ಹಾಗೂ ಮೊದಲ ಅಪೀಲು ನ್ಯಾಯಾಲಯದ ತೀರ್ಪನ್ನು ಸಮರ್ಥಿಸಿ ದೀರ್ಘವಾಗಿ ವಾದಿಸಿದ್ದಾರೆ. 9ನೇ ಪ್ರತಿವಾದಿ–ಸಮಾಪಕರ ಪರವಾದ ಮಾನ್ಯ ವಕೀಲರು ತಮ್ಮ ವಾದಗಳನ್ನು ಸಹ ಸಲ್ಲಿಸಿದ್ದಾರೆ. ಪ್ರಶ್ನಿತ ಸೊಸೈಟಿಯು ರದ್ದುಗೊಂಡಿರುವುದರಿಂದ ಸಮಾಪಕನನ್ನು ನೇಮಿಸಲಾಗಿದ್ದು, 9ನೇ ಸಂಖ್ಯೆಯ ಪ್ರತಿವಾದಿಯು ಸೊಸೈಟಿಯನ್ನು ಪ್ರತಿನಿಧಿಸಿದ್ದಾನೆ.

9. ಮಾನ್ಯ ನನ್ನ ಹಿಂದಿನ ವಕೀಲರು ರೂಪಿಸಿದ ಎರಡು ಗಣನೀಯ ಕಾನೂನಿನ ಪ್ರಶ್ನೆಗಳನ್ನು, ಅವರಿಗೆ ವ್ಯಾಪ್ತವಾಗಬಹುದಾದಂತೆ ಸಂಬಂಧ ಕಲ್ಪಿಸಿದ್ದಾರೆ. ಪರಿಮಿತಿಯ ಪ್ರಶ್ನೆ ಹಾಗೂ ವ್ಯಾಜ್ಯ ಕಾರಣವು ಈ ಎರಡೂ ಗಣನೀಯ ಕಾನೂನಿನ ಪ್ರಶ್ನೆಗಳೊಂದಿಗೆ ವ್ಯವಹರಿಸುತ್ತವೆಯೆಂಬ ಭಾವನೆಯಲ್ಲಿ ಸಂಪರ್ಕ ಹೊಂದಿವೆ. ಪರಿಮಿತಿಯ ಸಂಗತಿಯನ್ನು ವ್ಯಾಜ್ಯಕಾರಣದ ದಿನಾಂಕದಿಂದ ಪರಿಗಣಿಸಬೇಕಾಗುತ್ತದೆ ಹಾಗೂ ಈ ಭಾವನೆಯೊಂದಿಗೆ ಅವುಗಳ ಸಂಪರ್ಕ ಕಲ್ಪಿಸಲಾಗಿದೆ.

10. ವಾದಿಯನ್ನು ದಾವಾ ಅನುಸೂಚಿ ಸ್ವತ್ತುಗಳೆರಡರ ಸ್ವತ್ತಿನ ಮಾಲೀಕನೆಂದು ಅಭಿಪ್ರಾಯಪಡಲಾಗಿದೆ. 3ನೇ ಸಂಖ್ಯೆಯ ಪ್ರತಿವಾದಿಯು ಪಾರವ್ವನ ಹೆಸರಿನಲ್ಲಿ ಮಾಡಿಕೊಟ್ಟ ಕ್ರಯಪತ್ರವು ಸಿಂಧುವಾದುದೆಂದು ಅಭಿಪ್ರಾಯಪಡಲಾಗಿದೆ ಹಾಗೂ ವಾದಿಯನ್ನು ಪಾರವ್ವನ ದತ್ತು ಪುತ್ರನೆಂದು ಭಾವಿಸಲಾಗಿದೆ. ತೀರ್ಪನ್ನು ನೀಡುವ ಮೊದಲು ಜಪ್ತಿಗೆ ಸಂಬಂಧಪಟ್ಟಂತೆ ಮಾಡಲಾದ ಪರಿವರ್ತನೆಯ ನಮೂದನ್ನು ವಾದಿಯು ಒಪ್ಪಿಕೊಂಡಿರಲಿಲ್ಲವೆಂದು ಅಭಿಪ್ರಾಯಪಡಲಾಗಿದೆ. ಒಪ್ಪಿಕೊಂಡಿರುವಂತೆ, 3ನೇ ಸಂಖ್ಯೆಯ ಪ್ರತಿವಾದಿಯು, ತನ್ನ ಅತ್ತೆಯಾದ ಪಾರವ್ವನ ಹೆಸರಿಗೆ ದಾವಾ ಸ್ವತ್ತುಗಳನ್ನು ಮಾರಾಟ ಮಾಡುವ ಮೊದಲು ಜಪ್ತಿ ಮಾಡಿರಲಿಲ್ಲ. ದಾವೆಗಳನ್ನು ಮುಖ್ಯವಾಗಿ ನಿರ್ವಹಣೆಯ ಆಧಾರದ ಮೇಲೆ ವಜಾಗೊಳಿಸಲಾಗಿದೆ ಹಾಗೂ ವ್ಯಾಜ್ಯಕಾರಣವು ಇರಲಿಲ್ಲ. ಅಡಚಣೆಯ ತತ್ವಗಳನ್ನು ಅನ್ವಯಿಸುವ ಆಧಾರದ ಮೇಲೆ ದಾವೆಗಳನ್ನು ವಜಾಗೊಳಿಸಲಾಗಿದೆ. ಕರ್ನಾಟಕ ಸಹಕಾರಿ ಸಂಘಗಳ 125ನೇ ಪ್ರಕರಣದ ಪ್ರಕಾರ ಅದು ದಾವೆಯ ನಿರ್ವಹಣೆಗೆ ಸಂಬಂಧಿಸಿದ್ದಾಗಿದ್ದು ವಾದಿಯು ಸಂಘದ ಸದಸ್ಯನಾಗಿರದ ಆಧಾರದ ಮೇಲೆ ಅಧಿವಿಚಾರಣಾ ನ್ಯಾಯಾಲಯದ ನಿರ್ಣಯವನ್ನು ಅಪೀಲು ನ್ಯಾಯಾಲಯ ಎತ್ತಿಹಿಡಿದಿದೆ. ಆದ್ದರಿಂದ ದಾವೆಗಳನ್ನು ಸಲ್ಲಿಸುವುದಕ್ಕೆ ಮೊದಲು ಅವನಿಗೆ ಯಾವುದೇ ನೋಟೀಸನ್ನು ಹೊರಡಿಸಬೇಕಾಗಿರುವುದಿಲ್ಲ. ಆದ್ದರಿಂದ ಮೊದಲ ಅಪೀಲು ನ್ಯಾಯಾಲಯವು, ವಿವಾದಾಂಶ ಸಂ.7 ಹಾಗೂ 8ನ್ನು ಕುರಿತ ನಿರ್ಣಯವನ್ನು ವಿಪರ್ಯಗೊಳಿಸಲಾಗಿದೆ.

11. ಅದೇ ನ್ಯಾಯಾಲಯದ ಮುಂದೆ ಮೂಲದಾವೆ ಸಂ. 80/1987ರಲ್ಲಿ ಶಾಶ್ವತ ನಿರ್ಬಂಧಕಾಜ್ಞೆಯಿದ್ದರೂ, ಅದೇರೀತಿಯ ದಾವೆಯನ್ನು ಹೂಡಿರುವ ಆತನನ್ನು ದತ್ತು ಪಡೆದುಕೊಂಡ ತಾಯಿಯ ಹಿನ್ನೆಲೆಯಲ್ಲಿ ವ್ಯಾಜ್ಯಕಾರಣವನ್ನು ವಾದಿಯು ಹೊಂದಿರುವುದಿಲ್ಲವೆನ್ನುವ ಹಾಗೂ ಅವೆರಡೂ ನ್ಯಾಯಾಲಯ ಜಫ್ತಿಯ ತಿಳುವಳಿಕೆ ಹೊಂದಿದ್ದವು ಎನ್ನುವ ಆಧಾರದ ಮೇಲೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲುಗಳನ್ನು ವಜಾಗೊಳಿಸಲಾಗಿದೆ.

12. ಅಪೀಲುದಾರನ ಪರವಾಗಿರುವ ಮಾನ್ಯ ವಕೀಲರು ದೀರ್ಘವಾದ ವಾದಗಳನ್ನು ಮಂಡಿಸಿದ್ದಾರೆ. ಆ ದಿನದಿಂದ ಪ್ರಾರಂಭವಾದ ಹಕ್ಕು ಹಾಗೂ ಪರಿಮಿತಿಯ ವಾಸ್ತವಿಕ ಬೆದರಿಕೆ ಅಥವಾ ಹಕ್ಕಿನ ಅತಿಲಂಘನವಿದ್ದಾಗ, ಸಿವಿಲ್ ದಾವೆಯನ್ನು ಸಲ್ಲಿಸುವ ವ್ಯಾಜ್ಯಕಾರಣ ಉದ್ಭವಿಸುತ್ತದೆಯೆಂದು ವಾದಿಸಲಾಗಿದೆ. ಅವರು, ***ಶ್ರೀಮತಿ ರುಕ್ಮಬಾಯಿ –ವಿರುದ್ಧ– ಲಾಲ್ ಲಕ್ಷ್ಮಿನಾರಾಯಣ್ ಹಾಗೂ ಇತರರು*** [1], ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಅವಲಂಬಿಸಿದೆ. ಸರ್ವೋಚ್ಚ ನ್ಯಾಯಾಲಯದ ಮೂರುಜನ ಮಾನ್ಯ ನ್ಯಾಯಾಧೀಶರನ್ನೊಳಗೊಂಡ ಪೀಠವು ನೀಡಿದ ನಿರ್ಣಯ ಇದಾಗಿದೆ. 1908ರ ನಿರಸನಗೊಳಿಸಲಾದ ಪರಿಮಿತಿ ಅಧಿನಿಯಮದ 120ನೇ ಅನುಚ್ಛೇದದ ಉಪಬಂಧಗಳನ್ನು ಚರ್ಚಿಸುತ್ತಾ, ದಾವೆಯಲ್ಲಿ ಹೇಳಲಾದ ಹಕ್ಕಿನ ಪ್ರಾಪ್ತಿಯಾಗುವವರೆಗೆ ದಾವೆ ಹೂಡುವ ಹಕ್ಕನ್ನು ಹೊಂದಿರಲು ಸಾಧ್ಯವಿಲ್ಲವೆಂದು ಅದು ಅಭಿಪ್ರಾಯಪಟ್ಟಿದೆ ಹಾಗೂ ಅದರ ಅತಿಲಂಘನ ಅಥವಾ ಯಾರ ವಿರುದ್ಧ ದಾವೆಯನ್ನು ಹೂಡಲಾಗಿದೆಯೋ ಆ ಪ್ರತಿವಾದಿಯು ಆ ಹಕ್ಕನ್ನು ಅತಿಲಂಘಿಸಲು ಕನಿಷ್ಟಪಕ್ಷ ಸ್ಪಷ್ಟ ಹಾಗೂ ತಪ್ಪುಕಲ್ಪನೆಗೆ ಅವಕಾಶವಿಲ್ಲದ ಅತಿಲಂಘನ ಬೆದರಿಕೆಯಾಗಿರುತ್ತದೆ. ***ಮಾಸ್ಟರ್ ಬೋಲೋ –ವಿರುದ್ಧ– ಎಂ.ಟಿ. ಕೊಕ್ಲಾನ್***[2], ಪ್ರಕರಣದಲ್ಲಿ ಪ್ರೀವಿ ಕೌನ್ಸಿಲ್‌ನ ಐದು ಜನ ಮಾನ್ಯ ನ್ಯಾಯಾಧೀಶರನ್ನು ಒಳಗೊಂಡ ಪೀಠದ ನಿರ್ಣಯವನ್ನು, ಮೇಲೆ ಉಲ್ಲೇಖಿಸಲಾದ **ರುಕ್ಮಾಬಾಯ್**ರವರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ಕಳುಹಿಸಲಾಗಿದ್ದು ಅದನ್ನು ಅನುಸರಿಸಲಾಗಿದೆ. ಸದರಿ ನಿರ್ಣಯದಲ್ಲಿ ಮಾನ್ಯ ಪ್ರೀವಿಕೌನ್ಸಿಲ್ ದಾವೆಯಲ್ಲಿ

1. ಎಐಆರ್ 1960 ಎಸ್.ಸಿ. 335
2. ಎಐಆರ್ 1930 ಪಿಸಿ 270

ಹೇಳಲಾದ ಹಕ್ಕು ಪ್ರಾಪ್ತವಾಗುವವರೆಗೆ ದಾವೆಹೂಡುವ ಹಕ್ಕು ಇರುವುದಿಲ್ಲವೆಂದು ಹಾಗೂ ಅದರ ಅತಿಲಂಘನ ಅಥವಾ ಯಾರ ವಿರುದ್ಧ ದಾವೆಯನ್ನು ಹೂಡಲಾಗಿದೆಯೋ ಆ ಪ್ರತಿವಾದಿಯು ಆ ಹಕ್ಕಿನ ಕನಿಷ್ಟಪಕ್ಷ ಸ್ಪಷ್ಟ ಹಾಗೂ ತಪ್ಪು ಕಲ್ಪನೆಗೆ ಅವಕಾಶವಿಲ್ಲದ ಅತಿಲಂಘನದ ಬೆದರಿಕೆಯಾಗಿರುತ್ತದೆಂದು ಅಭಿಪ್ರಾಯಪಟ್ಟಿದೆ.

13. ಎದುರುದಾರ ಸಂ.1 ಹಾಗೂ 2ನ್ನು ಪ್ರತಿನಿಧಿಸಿರುವ ಮಾನ್ಯ ಸರ್ಕಾರಿ ವಕೀಲರು ***ಖಾತ್ರಿ ಹೋಟೆಲುಗಳ ಖಾಸಗಿ ನಿಯಮಿತ ಹಾಗೂ ಮತ್ತೊಬ್ಬರು – ವಿರುದ್ಧ–ಭಾರತ ಒಕ್ಕೂಟ ಹಾಗೂ ಮತ್ತೊಬ್ಬರು*** [3], ಪ್ರಕರಣದಲ್ಲಿ ವರದಿಯಾದ ಸರ್ವೋಚ್ಚ ನ್ಯಾಯಾಲಯದ ನಿರ್ಣಯವನ್ನು ಆಧರಿಸಿದ್ದಾರೆ. 9ನೇ ಸಂಖ್ಯೆಯ ಎದುರುದಾರರ ಪರವಾಗಿರುವ ಮಾನ್ಯ ವಕೀಲರು ಸಹ ಪರಿಮಿತಿ ಅಧಿನಿಯಮ, 1963ರ 58ನೇ ಅನುಚ್ಛೇದವನ್ನು ನಿರಸನಗೊಳಿಸಲಾದ ಪರಿಮಿತಿ ಅಧಿನಿಯಮ, 1908ರ 120ನೇ ಅನುಚ್ಛೇದದಿಂದ ಮುಖ್ಯವಾಗಿ ಬಿಟ್ಟುಬಿಡಲಾಗಿದೆಯೆಂದು ವಾದಿಸುವ ಸದರಿ ನಿರ್ಣಯವನ್ನು ಅವಲಂಬಿಸಿದ್ದಾರೆ. ಆದ್ದರಿಂದ ಸರ್ವೋಚ್ಚ ನ್ಯಾಯಾಲಯವು ***ರುಕ್ಮಾಬಾಯಿ*** ಪ್ರಕರಣದಲ್ಲಿ ಸಲ್ಲಿಸಲಾದ ಸದರಿ ನಿರ್ಣಯವನ್ನು ಪ್ರಕರಣದ ಸಂಗತಿಗಳಿಗೆ ಅನ್ವಯಿಸಿರುವುದಿಲ್ಲ.

14. ಅನ್ವಯತೆಯನ್ನು ಅಥವಾ ಅನ್ಯಥಾ ಪ್ರಕರಣದ ಸಂಗತಿಗಳಿಗೆ ಪಕ್ಷಕಾರರು ಅವಲಂಬಿಸಿದ ನಿರ್ಣಯಗಳನ್ನು ಕುರಿತು ಚರ್ಚಿಸುವ ಮೊದಲು ಇದು ಪ್ರಕರಣದ ಕೆಲವು ಸಂಗತಿಗಳನ್ನು ಗಮನಿಸುವುದಕ್ಕೆ ಸಂಬಂಧಪಟ್ಟಿದೆ. 3ನೇ ಸಂಖ್ಯೆಯ ಪ್ರತಿವಾದಿಯು ಅನುಸೂಚಿ ಸ್ವತ್ತಿನ ಸ್ವಾಧೀನ ಹೊಂದಿರುವ ಸಂಪೂರ್ಣ ಮಾಲೀಕನಾಗಿದ್ದನೆಂಬ ಸಂಗತಿಯಲ್ಲಿ ಯಾವುದೇ ವಿವಾದವಿಲ್ಲ. ವಾದಿಯನ್ನು ದಿನಾಂಕ 29.05.1967ರಂದು ಶ್ರೀಮತಿ ಪಾರವ್ವನಿಗೆ ಮೂರನೇ ಪ್ರತಿವಾದಿಯು ದತ್ತು ನೀಡಿದ್ದರಲ್ಲಿ ಸಹ ಯಾವುದೇ ಸಂಶಯವಿಲ್ಲ. ಶ್ರೀಮತಿ ಪಾರವ್ವನು ವಾದಿಯನ್ನು ದತ್ತು ಪಡೆದಿರುವುದಕ್ಕೆ ನೋಂದಾಯಿತ ದತ್ತುಪತ್ರದ ಮೂಲಕ ಸಾಕ್ಷಿಯಿದೆ

3. (2011) 9 ಎಸ್‌ಸಿಸಿ 126

ಹಾಗೂ ಮೂಲ ದತ್ತು ಪಡೆದ ಪತ್ರವನ್ನು ಹಿಂದೂ ದತ್ತು ಪಡೆಯುವಿಕೆ ಹಾಗೂ ನಿರ್ವಹಣೆ ಅಧಿನಿಯಮದ 16ನೇ ಪ್ರಕರಣದ ನಿಶಾನೆ ಪಿ.4 ಎಂದು ಗುರುತು ಮಾಡಲಾಗಿದ್ದು, ಇದು, ಯುಕ್ತ ದತ್ತು ಪಡೆಯುವಿಕೆಗೆ ಸಂಬಂಧಿಸಿದಂಥ ಪೂರ್ವಭಾವನೆಯನ್ನು ತಳೆಯಲು ನ್ಯಾಯಾಲಯವನ್ನು ಶಕ್ತಗೊಳಿಸುತ್ತದೆ ಹಾಗೂ ಅಂಥ ದತ್ತು ಪಡೆಯುವಿಕೆಯ ನೈಜತೆ ಅಥವಾ ಅಧಿಕೃತತೆ ಅಥವಾ ಸಿಂಧುತ್ವವನ್ನು ವಿರೋಧಿಸುವ ವ್ಯಕ್ತಿಗೆ ಯಾವಾಗಲೂ ಅದು ಹೊರೆಯಾಗಿರುತ್ತದೆ. ಏನೇ ಆದರೂ, ಅಧಿವಿಚಾರಣಾ ನ್ಯಾಯಾಲಯವು, ವಾದಿಯು ದತ್ತುಪುತ್ರನಾಗಿದ್ದಾನೆಂದು ಹಾಗೂ ಮೊದಲ ಅಪೀಲು ನ್ಯಾಯಾಲಯವು ಅದನ್ನು ಸಮರ್ಥಿಸಿದೆಯೆಂದು ಅಭಿಪ್ರಾಯಪಟ್ಟಿದೆ. ದಿನಾಂಕ 01.06.1977ರಂದು 3ನೇ ಸಂಖ್ಯೆಯ ಪ್ರತಿವಾದಿಯು ಬರೆದುಕೊಟ್ಟ ಕ್ರಯಪತ್ರದ ಆಧಾರದ ಮೇಲೆ ಎಂದರೆ ಪಾರವ್ವನು ವಾದಿಯನ್ನು ದತ್ತು ಪಡೆದುಕೊಂಡ ಸುಮಾರು ಹತ್ತು ವರ್ಷಗಳ ನಂತರ ಪಾರವ್ವನ ಹೆಸರನ್ನು ದಾವಾ ಸ್ವತ್ತಿನ ಖಾತಾದಾರಳೆಂದು ಸೇರಿಸಲಾಗಿದೆ. ಅವಳು ಅನುಸೂಚಿ ಸ್ವತ್ತಿನ ಒಡತಿಯಾಗಿದ್ದಾಳೆ ಹಾಗೂ ಅದನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾಳೆ. ತತ್ಪರಿಣಾಮವಾಗಿ ಅವಳ ಸಾವಿನ ತರುವಾಯ, ವಾದಿಯು ಆಸ್ತಿಗೆ ಉತ್ತರಾಧಿಕಾರಿಯಾಗಿದ್ದಾನೆ ಹಾಗೂ ಅದರ ಒಡೆಯನಾಗಿ ಅದನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾನೆ ಹಾಗೂ ಅಧಿವಿಚಾರಣಾ ನ್ಯಾಯಾಲಯ ಹಾಗೂ ಅಪೀಲು ನ್ಯಾಯಾಲಯವು ವಾದಿಯ ಒಡೆತನ ಹಾಗೂ ಸ್ವಾಧೀನತೆಗೆ ಸಂಬಂಧಿಸಿದ ವಾದಿಯ ಹೇಳಿಕೆಯನ್ನು ಎತ್ತಿಹಿಡಿದಿದೆ.

15. ಮೂರನೇ ಪ್ರತಿವಾದಿಯು, ರಾಮದುರ್ಗದ ನಗರ ಸಹಕಾರಿ ಬ್ಯಾಂಕ್‌ನಲ್ಲಿ ಉದ್ಯೋಗಿಯಾಗಿ ಕಾರ್ಯನಿರ್ವಹಿಸಿದ್ದು, ಅವನು ಹಣವನ್ನು ದುರುಪಯೋಗ ಮಾಡಿರುವ ಸಂಬಂಧದಲ್ಲಿ ತೀರ್ಪನ್ನು ಹೊರಡಿಸಲು ಸಹಕಾರಿ ಸಂಘಗಳ ಸಹಾಯಕ ರಿಜಿಸ್ಟ್ರಾರನ ಮುಂದೆ ಅವನ ವಿರುದ್ಧ ಮೊಕದ್ದಮೆಗಳನ್ನು ದಾಖಲು ಮಾಡಲಾಗಿದೆಯೆನ್ನುವ ಸಂಗತಿಯಲ್ಲಿ ಯಾವುದೇ ವಿವಾದವಿಲ್ಲ. ಅವನು ಆಪಾದಿತವಾಗಿ ದುರುಪಯೋಗ ಮಾಡಿದ ಹಣದ ವಸೂಲಿ ಮಾಡಲು ಮೂರನೇ ಪ್ರತಿವಾದಿಯ ವಿರುದ್ಧ ಆರು ಐತೀರ್ಪುಗಳನ್ನು ಹೊರಡಿಸಲಾಗಿದೆ. ಆದ್ದರಿಂದ

ಅನುಸೂಚಿ ಸ್ವತ್ತಿನ ಮಾಲೀಕಳಾಗಿರುವ ಪಾರವ್ವನು ದಿನಾಂಕ 03.09.1987ರಂದು ದಾವೆಯನ್ನು ಹೂಡುವ ಮೂಲಕ ರಾಮದುರ್ಗದಲ್ಲಿರುವ ಅಂದಿನ ನ್ಯಾಯಾಲಯದ ಮುನ್ಸೀಫರಿಗೆ ಮೂಲದಾವೆ ಸಂ. 80/1987ರಲ್ಲಿ ದಾವೆಯನ್ನು ಸಲ್ಲಿಸಲು ಆಯ್ಕೆ ಮಾಡಿಕೊಂಡಿದ್ದಾಳೆ. ಮೂಲದಾವೆ ಸಂ. 80/1987ರಲ್ಲಿ ಪಾರವ್ವನು ತನ್ನ ದತ್ತುಪುತ್ರ ಬಸವರಾಜನೊಂದಿಗೆ ಸಲ್ಲಿಸಿದ ವಾದಪತ್ರದ ಪ್ರಮಾಣೀಕೃತ ಪ್ರತಿಯನ್ನು ನಿಶಾನೆ ಡಿ.2 ಎಂದು ಗುರುತು ಮಾಡಲಾಗಿದೆ. ಸಹಕಾರಿ ಸಂಘಗಳ ಸಹಾಯಕ ರಿಜಿಸ್ಟ್ರಾರ್, ಬೈಲಹೊಂಗಲ, ವಸೂಲಾತಿ ಅಧಿಕಾರಿ ಹಾಗೂ ಮಾರಾಟ ಅಧಿಕಾರಿ ಇವರ ವಿರುದ್ಧ ಸದರಿ ದಾವೆಯನ್ನು ಹೂಡಲಾಗಿತ್ತು. ಹಾಗೂ ಅವರು 1ರಿಂದ 3ರವರೆಗಿನ ಸಂಖ್ಯೆಯ ಪ್ರತಿವಾದಿಗಳಾಗಿದ್ದಾರೆ. 1ರಿಂದ 3ರವರೆಗಿನ ಪ್ರತಿವಾದಿಗಳು ಹೊರಡಿಸಿದ ಸಾರ್ವಜನಿಕ ನೋಟೀಸಿನಲ್ಲಿ ರಾಮದುರ್ಗದಲ್ಲಿ ದಿನಾಂಕ 07.09.1987ರಂದು ಸದರಿ ಜಮೀನುಗಳ ಬಹಿರಂಗ ಹರಾಜನ್ನು ಮಾಡಿರುವುದನ್ನು ಕಾನೂನುಬಾಹಿರವೆಂದು ಖಂಡಿಸಲಾಗಿತ್ತು. ಬಹಿರಂಗ ಹರಾಜಿನಲ್ಲಿ ದಾವಾ ಜಮೀನುಗಳನ್ನು ಮಾರಾಟ ಮಾಡಲು ಉದ್ದೇಶಿಸಿ ಯಾವ ದಿನಾಂಕದಂದು ಸಾರ್ವಜನಿಕ ನೋಟೀಸನ್ನು ಹೊರಡಿಸಲಾಗಿತ್ತೋ ಆ ದಿನಾಂಕದಿಂದ ಮೂಲದಾವೆ ಸಂ. 80/1987ರಲ್ಲಿ ದಾವೆಯನ್ನು ಹೂಡುವುದು ವ್ಯಾಜ್ಯಕಾರಣವಾಗಿದೆ. ನಿಶಾನೆ ಡಿ.2ರಲ್ಲಿ ಕಂಡುಬಂದಂಥ ಮೂಲದಾವೆ ಸಂ. 80/1987ರಲ್ಲಿ ಸಲ್ಲಿಸಲಾದ ವಾದಪತ್ರದ 3ನೇ ಹಾಗೂ 4ನೇ ಸಂಖ್ಯೆಯ ಕಂಡಿಕೆಗಳನ್ನು ಈ ಕೆಳಗಿನಂತೆ ಪುನಃ ಹಾಜರುಪಡಿಸಲಾಗಿದೆ :

> “3) ಪ್ರತಿವಾದಿಗಳು, ಯಾವುದೇ ಕಾನೂನುಬದ್ಧ ಪ್ರಾಧಿಕಾರವಿಲ್ಲದೆ, ರಾಮದುರ್ಗದಲ್ಲಿ ದಿನಾಂಕ 7.9.1987ರಂದು ಮಧ್ಯಾಹ್ನ 2 ಗಂಟೆಗೆ ಎರಡೂ ದಾವಾ ಜಮೀನುಗಳ ಮಾರಾಟ ಮಾಡಲು ಬಹಿರಂಗ ಹರಾಜನ್ನು ಮಾಡುವುದಕ್ಕೆ ಅವರು ಹೋಗಿದ್ದರೆನ್ನುವ ಅಂಶವನ್ನು ಅದರಲ್ಲಿ ಸೂಚಿಸಿರುವ ಸಾರ್ವಜನಿಕ ನೋಟೀಸನ್ನು ಕಾನೂನುಬಾಹಿರವಾಗಿ ಹೊರಡಿಸಿದೆ. ಪ್ರತಿವಾದಿಗಳು ಯಾವುದೇ ರೀತಿಯಲ್ಲಿ, ಬಹಿರಂಗ ಹರಾಜಿನ ಮೂಲಕ ದಾವಾ ಜಮೀನುಗಳನ್ನು ಮಾರಾಟ ಮಾಡುವ ಹಕ್ಕನ್ನು ಹೊಂದಿರಲಿಲ್ಲ. ಹಾಗೂ ಆ ಮೂಲಕ

ವಾದಿಗಳಿಗೆ ತುಂಬಲಾರದ ನಷ್ಟ ಹಾಗೂ ತೊಂದರೆಯನ್ನುಂಟು ಮಾಡಿದೆ. ಅವರ ಕ್ರಮ ಬರಿ ಕಾನೂನುಬಾಹಿರ ಹಾಗೂ ದರ್ಪದಿಂದ ಕೂಡಿರುವುದಷ್ಟೇ ಅಲ್ಲ. ದಾವಾ ಜಮೀನುಗಳಲ್ಲಿ ವಾದಿಗಿರುವ ಹಕ್ಕು, ಸ್ವಾಮ್ಯ ಹಾಗೂ ಹಿತಾಸಕ್ತಿಗೆ ಹೆಚ್ಚಿನ ನಷ್ಟವನ್ನುಂಟು ಮಾಡಿದೆ. ಆದುದರಿಂದ ದಾವಾ ಜಮೀನುಗಳಲ್ಲಿನ ವಾದಿಯ ಹಕ್ಕು, ಸ್ವಾಮ್ಯ, ಹಾಗೂ ಹಿತಾಸಕ್ತಿಯಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಕಾರ್ಯ ಅಥವಾ ಕಾರ್ಯಗಳನ್ನು ಮಾಡುವುದರಿಂದ ಅವರನ್ನು ತಡೆದು ಪ್ರತಿವಾದಿಗಳ ವಿರುದ್ಧ ಶಾಶ್ವತ ನಿರ್ಬಂಧಕಾಜ್ಞೆಯನ್ನು ಪಡೆಯಲು ವಾದಿಗಳು ಈ ದಾವೆಯನ್ನು ಹೂಡುವ ಪೇಚಿಗೆ ಸಿಲುಕಿದ್ದಾರೆ.

4) ದಿನಾಂಕ 07.09.1987ರಂದು ಬಹಿರಂಗ ಹರಾಜನ್ನು ಮಾಡುವ ಮೂಲಕ ದಾವಾ ಜಮೀನುಗಳನ್ನು ಮಾರಾಟ ಮಾಡಲು ಸಾರ್ವಜನಿಕ ನೋಟೀಸನ್ನು ವಾದಿಗಳು ಹೊರಡಿಸಿದಾಗ ಈ ದಾವೆಯ ವ್ಯಾಜ್ಯಕಾರಣವು ಉದ್ಭವಿಸಿದೆ.''

16. ಮೂಲದಾವೆ ಸಂ. 80/1987ರಲ್ಲಿ 1ರಿಂದ 3ರವರೆಗಿನ ಸಂಖ್ಯೆಯ ಪ್ರತಿವಾದಿಗಳು ಸಲ್ಲಿಸಿದ ಲಿಖಿತ ಹೇಳಿಕೆಯ ಪ್ರತಿಯನ್ನು ನಿಶಾನೆ ಡಿ.3 ಎಂದು ಗುರುತು ಮಾಡಲಾಗಿದೆ. ನಿಶಾನೆ ಡಿ.3ರಲ್ಲಿ ಕಂಡುಬಂದಂಥ ಮೂಲದಾವೆ ಸಂ.80/1987ರಲ್ಲಿ 1ರಿಂದ 3ರವರೆಗಿನ ಸಂಖ್ಯೆಯ ಪ್ರತಿವಾದಿಗಳು ಸಲ್ಲಿಸಿದ ಲಿಖಿತ ಹೇಳಿಕೆಯ ಅಂಶಗಳು ಹಾಗೂ ಈ ಆರು ಸಾಮಾನ್ಯ ಎರಡನೇ ಅಪೀಲುಗಳನ್ನು ಆಧರಿಸಿರುವ ಮೇಲಿನ ಆರು ದಾವೆಗಳಲ್ಲಿನ 1 ಹಾಗೂ 2ನೇ ಸಂಖ್ಯೆಯ ಪ್ರತಿವಾದಿಯು ಸಲ್ಲಿಸಿದ ಲಿಖಿತ ಹೇಳಿಕೆಗಳಲ್ಲಿ ಕಂಡುಬಂದ ದೃಢೋಕ್ತಿಗಳು ಒಂದೇ ತೆರನಾಗಿವೆ.

17. ಸಿವಿಲ್ ಪ್ರಕ್ರಿಯಾ ಸಂಹಿತೆಯ 1 ಹಾಗೂ 2ನೇ ನಿಯಮದ 39ನೇ ಆದೇಶದ ಮೇರೆಗೆ 2ನೇ ಸಂಖ್ಯೆಯ ವಾದಿಯಾಗಿ ಈ ವಾದಿಯು ಮೂಲದಾವೆ

ಸಂ. 80/97ರಲ್ಲಿ ಐ.ಎ.ಸಂ. 1ರ ಪ್ರಕಾರ ಸಲ್ಲಿಸಲಾದ ಅರ್ಜಿಯು ನಿಶಾನೆ ಡಿ.4 ಆಗಿರುತ್ತದೆ. ನಿಶಾನೆ ಡಿ.4ರಲ್ಲಿ ಕಂಡುಬಂದ ಐ.ಎ.ಸಂ.1ನ್ನು ಲಗತ್ತಿಸಿರುವ ಅಫಿಡವಿಟ್‌ನಲ್ಲಿ ಈ ವಾದಿಯು, ಪಾರವ್ವನು ತನ್ನ ದತ್ತುಪಡೆದ ತಾಯಿಯಾಗಿದ್ದಾಳೆಂದು ಹಾಗೂ ಪ್ರಕರಣದ ಸಂಗತಿಗಳನ್ನು ಅವನು ಚೆನ್ನಾಗಿ ತಿಳಿದುಕೊಂಡಿದ್ದಾನೆಂದು ಹಾಗೂ ತನ್ನನ್ನು ದತ್ತುಪಡೆದ ತಾಯಿ–1ನೇ ಸಂಖ್ಯೆಯ ವಾದಿಯ ಪರವಾಗಿಯೂ ಹಾಗೂ ತನ್ನ ಪರವಾಗಿಯೂ ಪ್ರಮಾಣ ಮಾಡಲೂ ಸಹ ಸಕ್ಷಮನಾಗಿರುವನೆಂದು, ಅವಳಿಗೆ ತುಂಬಾ ವಯಸ್ಸಾಗಿದ್ದರಿಂದ ಹೆಚ್ಚು ನಿರ್ದಿಷ್ಟವಾಗಿರುವುದನ್ನು ಹಾಗೂ ಸಾಮಾನ್ಯ ಅಂಶಗಳನ್ನು ತಿಳಿಸುವ ಸ್ಥಿತಿಯಲ್ಲಿರಲಿಲ್ಲವೆಂದು ಈ ವಾದಿಯು ಪ್ರಮಾಣ ಮಾಡಿರುವನು.

18. ನಿಶಾನೆ ಡಿ.5 ಇದು, 1 ಹಾಗೂ 2ನೇ ನಿಯಮದ 39ನೇ ಆದೇಶದ ಮೇರೆಗೆ ಸಲ್ಲಿಸಲಾದ ಐ.ಎ.ಸಂ. 1ನ್ನು ವಜಾಗೊಳಿಸುವ ಮೂಲದಾವೆ ಸಂ. 80/1987ರ ಐ.ಎ. ಸಂ. 1ರಲ್ಲಿ ಹೊರಡಿಸಿದ ಆದೇಶವಾಗಿದೆ. ಈ ಮೊದಲು ಮಂಜೂರಾಗಿದ್ದ ಏಕಪಕ್ಷೀಯ ಪ್ರತಿಬಂಧಕಾಜ್ಞೆಯನ್ನು, ಮಾನ್ಯ ಮುನ್ಸೀಫ್‌ರವರು ಯಾವ ದಿನಾಂಕದಂದು ಐ.ಎ.ಸಂಖ್ಯೆಯನ್ನು ವಜಾಗೊಳಿಸಿದ್ದರೋ ಆ ದಿನಾಂಕ 01.09.1989ರಿಂದ ತ್ವರಿತವಾಗಿ ತೆರವಾಗಿತ್ತು. ಈ ಎಲ್ಲಾ ಆರು ದಾವೆಗಳಲ್ಲಿ ವಾದಿಯು ತಾನು ಹಾಗೂ ತನ್ನ ದತ್ತು ಪಡೆದ ತಾಯಿಯು ಮೂಲದಾವೆ ಸಂ. 80/1987ರಲ್ಲಿ ಸಲ್ಲಿಸಿದ ಮೊದಲಿನ ದಾವೆಯನ್ನು ಕುರಿತು ವಾದಿಯದ ಬಸವರಾಜ್ ಯಾವುದೇ ಉಲ್ಲೇಖ ಮಾಡಿಲ್ಲವೆಂಬುದು ಕಂಡುಬರುತ್ತದೆ. ಅವನ ಪ್ರಕಾರ, ವ್ಯಾಜ್ಯಕಾರಣವು, ಮೂಲದಾವೆ ಸಂ. 133/1995ರಷ್ಟರ ಮಟ್ಟಿಗೆ ದಿನಾಂಕ 12.12.1995ರಂದು ಎಂದರೆ ಯಾವ ದಿನಾಂಕದಂದು ಬಹಿರಂಗ ಮಾರಾಟ ನೋಟೀಸನ್ನು ಹೊರಡಿಸಲಾಗಿತ್ತೋ ಆ ದಿನಾಂಕದಂದು ಉದ್ಭವಿಸಿತು. ಹಾಗೆಯೇ 1995 ಹಾಗೂ 1996ನೇ ವರ್ಷದಲ್ಲಿ ಹೊರಡಿಸಲಾದ ನೋಟೀಸುಗಳನ್ನು ಕುರಿತಂತೆ ಇತರ ದಾವೆಗಳಲ್ಲಿ ಉಲ್ಲೇಖವನ್ನು ಮಾಡಿರುವುದಿಲ್ಲ. ಈ ಎಲ್ಲಾ ಆರು ದಾವೆಗಳಲ್ಲಿ ಸಲ್ಲಿಸಲಾದ ವಾದಪತ್ರಗಳನ್ನು ಸರಳವಾಗಿ ಓದಿದ ನಂತರ, ಅವನು ಪ್ರಶ್ನಿತ ಸ್ವತ್ತುಗಳ ಜಪ್ತಿ ಬಗ್ಗೆ ಯಾವುದೇ ತಿಳಿವಳಿಕೆಯನ್ನು ಹೊಂದಿರದಿದ್ದುದರಿಂದ,

ಪ್ರಸ್ತಾವಿತ ಬಹಿರಂಗ ಹರಾಜನ್ನು 1987ನೇ ವರ್ಷದಲ್ಲಿ ಪ್ರಸ್ತಾವಿಸಲಾಗಿದೆ. ಆತನ ತಾಯಿಯೊಂದಿಗೆ ಮೂಲದಾವೆ ಸಂ. 80/1987ರಲ್ಲಿ ಈ ಮೊದಲು ಹೂಡಿದ ದಾವೆಯಲ್ಲಿ ಇರುವುದನ್ನು ಗಮನದಲ್ಲಿಟ್ಟುಕೊಂಡು ಹಾಗೂ ಮೂಲದಾವೆ ಸಂ. 80/1987ರಲ್ಲಿ ದಾವೆ ಹೂಡಲು ಉದ್ಭವಿಸಿದ ವಾಸ್ತವಿಕ ವ್ಯಾಜ್ಯಕಾರಣ ಕುರಿತು ಅಫಿಡವಿಟ್‌ನಲ್ಲಿ ಮಾಡಲಾದ ಪ್ರತಿಜ್ಞೆಯನ್ನು ಗಮನದಲ್ಲಿಟ್ಟುಕೊಂಡು ವಾದಿಯು ಬದಲಾಗಲು ಸಾಧ್ಯವಾಗುವುದಿಲ್ಲ. ಹಾಗೂ ಅನುಕ್ರಮವಾಗಿ 12.12.1995 ಹಾಗೂ 13.01.1996ರಂದು ಮೂರು ಪ್ರತ್ಯೇಕ ಸಾರ್ವಜನಿಕ ನೋಟೀಸುಗಳನ್ನು ಹೊರಡಿಸಿದಾಗ 1995 ಹಾಗೂ 1996ನೇ ವರ್ಷದಲ್ಲಿ ಮಾತ್ರ ಈ ಎಲ್ಲಾ ಆರು ದಾವೆಗಳಿಗೆ ವ್ಯಾಜ್ಯ ಕಾರಣ ಉದ್ಭವಿಸಿದೆಯೆಂದು ತಿಳಿಸಿದ್ದಾರೆ.

19. ಸರ್ವೋಚ್ಚ ನ್ಯಾಯಾಲಯದ ***ಖಾತ್ರಿ ಹೋಟೆಲುಗಳ ಖಾಸಗಿ ನಿಯಮಿತ ಹಾಗೂ ಮತ್ತೊಬ್ಬರು–ವಿರುದ್ಧ–ಭಾರತ ಒಕ್ಕೂಟ ಹಾಗೂ ಮತ್ತೊಬ್ಬರು*** (ಮೇಲಿನ) ಪ್ರಕರಣದಲ್ಲಿ 58ನೇ ಅನುಚ್ಛೇದ ಹಾಗೂ ಪರಿಮಿತಿ ಅಧಿನಿಯಮ, 1963ರ 5ನೇ ಪ್ರಕರಣವನ್ನು ಕುರಿತದ್ದಾಗಿದೆ. ***ರುಕ್ಮಾಬಾಯಿ*** ಪ್ರಕರಣ ಹಾಗೂ ***ಬೋಲೋ–ವಿರುದ್ಧ–ಕೋಕ್ಲಾನ್*** ಪ್ರಕರಣದಲ್ಲಿ ನೀಡಲಾದ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯಗಳನ್ನು ಉಲ್ಲೇಖಿಸಲಾಗಿದೆ ಹಾಗೂ ***ಖಾತ್ರಿ ಹೋಟೆಲ್*** ಪ್ರಕರಣದಲ್ಲಿ ಚರ್ಚಿಸಲಾಗಿದೆ. ***ಖಾತ್ರಿ ಹೋಟೆಲ್‌***ನ ಪ್ರಕರಣದಲ್ಲಿ ಸಲ್ಲಿಸಲಾದ ನಿರ್ಣಯದ 138ನೇ ಪುಟದಲ್ಲಿ 25ನೇ ಕಂಡಿಕೆಯಲ್ಲಿ ಪರಿಮಿತಿ ಅಧಿನಿಯಮ, 1963ರ ಅನುಸೂಚಿಯ 58ನೇ ಅನುಚ್ಛೇದವನ್ನು ಉಲ್ಲೇಖಿಸಲಾಗಿದೆ ಹಾಗೂ ಪರಿಮಿತಿ ಅಧಿನಿಯಮ 1908ರ ಅನುಸೂಚಿಯ 120ನೇ ಅನುಚ್ಛೇದದ ಕಂಡಿಕೆ ಸಂ. 26ರಲ್ಲಿ ಸಹ ಉಲ್ಲೇಖಿಸಲಾಗಿದೆ.

20. ಈ ಎರಡೂ ಅನುಚ್ಛೇದಗಳ ನಡುವೆ ಇರುವ ಅಂತರವನ್ನು ***ಖಾತ್ರಿ ಹೋಟೆಲ್‌***ನ ಪ್ರಕರಣದಲ್ಲಿನ ನಿರ್ಣಯದ 139ನೇ ಪುಟದಲ್ಲಿರುವ ಕಂಡಿಕೆ ಸಂ. 30ರಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಕಂಡಿಕೆ ಸಂ. 30ನ್ನು ಈ ಮುಂದಿನಂತೆ ಪುನಃ ಹಾಜರುಪಡಿಸಲಾಗಿದೆ :

> "30. ಅಧಿನಿಯಮ, 1963ರ 58ನೇ ಅನುಚ್ಛೇದವನ್ನು ಅಧಿನಿಯಮಿಸುವಾಗ, ಶಾಸನ ರಚನೆಯು, ಅಧಿನಿಯಮ, 1908ರ 120ನೇ ಅನುಚ್ಛೇದದ ಭಾಷೆಯಲ್ಲಿ ಉದ್ದೇಶಿತವಾಗಿ ಹೊಸ ಮಾರ್ಗವನ್ನು ರೂಪಿಸಿದೆ. "ಮೊದಲು" ಎಂಬ ಪದವನ್ನು "ದಾವೆ ಹೂಡುವುದು ಹಾಗೂ ಪ್ರಾಪ್ತಗೊಳಿಸುವುದು" ಎಂಬ ಪದಗಳ ಮಧ್ಯೆ ಬಳಸಲಾಗಿದೆ. ಇದು, ದಾವೆಯು ಬಹುವಿಧದ ವ್ಯಾಜ್ಯ ಕಾರಣವನ್ನು ಆಧರಿಸಿದ್ದರೆ, ದಾವೆಹೂಡುವ ಹಕ್ಕು ಮೊದಲು ಪ್ರಾಪ್ತವಾದಾಗ ಆ ದಿನಾಂಕದಿಂದ ಪರಿಮಿತಿಯು ಅವಧಿ ಪ್ರಾರಂಭವಾಗುತ್ತದೆ. ಅನುಕ್ರಮ ಹಕ್ಕಿನ ಉಲ್ಲಂಘನೆಯಿಂದ ಹೊಸ ಕಾರಣ ಉದ್ಭವವಾಗುವುದಿಲ್ಲ. ವಿಭಿನ್ನವಾಗಿ ತಿಳಿಸಲಾಗುತ್ತದೆ ಹಾಗೂ ದಾವೆ ಹೂಡುವ ಹಕ್ಕು ಮೊದಲು ಪ್ರಾಪ್ತವಾದಾಗ ಆ ದಿನಾಂಕದಿಂದ ಲೆಕ್ಕಹಾಕಿದ ಪರಿಮಿತಿಯ ಅವಧಿಯನ್ನು ಅದು ಮೀರಿದ್ದರೆ ದಾವೆಯನ್ನು ವಜಾಗೊಳಿಸಬೇಕಾಗುತ್ತದೆ."

21. ಪ್ರಸ್ತುತ ಪ್ರಕರಣಗಳಲ್ಲಿ, ವಾದಿಯು 1987ನೇ ವರ್ಷದಲ್ಲಿ ಮೊದಲಿನ ಜಫ್ತಿಯ ಆಧಾರದ ಮೇಲೆ ಅನುಸೂಚಿ ಸ್ವತ್ತುಗಳನ್ನು ಹರಾಜು ಹಾಕುವ ಪ್ರತಿವಾದಿ ಸಂ. 1 ಹಾಗೂ 2 ಇವರು ಹೊರಡಿಸಿದ ಸಾರ್ವಜನಿಕ ನೋಟೀಸುಗಳ ಸ್ಪಷ್ಟ ತಿಳಿವಳಿಕೆಯಿತ್ತೆಂಬುದನ್ನು ಸಾಬೀತುಪಡಿಸಲು ಪ್ರತಿವಾದಿ ಸಂ. 1 ಹಾಗೂ 2 ಇವರ ದಾಖಲೆಯಲ್ಲಿ ಪ್ರಬಲ ಸಾಕ್ಷಿಯಿರುತ್ತದೆ. ಯಾವ ಮೂಲದಾವೆ ಸಂ. 80/1987ರಲ್ಲಿ ಈ ದಾವೆಯ ವ್ಯಾಜ್ಯಕಾರಣ ಉದ್ಭವಿಸಿದೆಯೋ ಅದರಲ್ಲಿ ವಾದಿ ಹಾಗೂ ಆತನ ದತ್ತು ಪಡೆದ ತಾಯಿಯು ಸಲ್ಲಿಸಿದ ಮೊದಲಿನ ದಾವೆ ಕುರಿತು ವಾದಿಯು ತುಟಿಬಿಚ್ಚಿಲ್ಲ. ಮೂಲದಾವೆ ಸಂ. 80/1987ರಲ್ಲಿ ಸದರಿ ದಾವೆಯು, ಶಾಶ್ವತ ನಿರ್ಬಂಧಕಾಜ್ಞೆಯ ಮುಖ್ಯ ನೆರವನ್ನು ಕೋರಿದ್ದರೂ, ಈ ಆರು ದಾವೆಗಳಲ್ಲಿ ಕಂಡುಬಂದ ಎಲ್ಲಾ ಅಂಶಗಳು ಸದರಿ ದಾವೆ ಮೂಲದಾವೆ ಸಂ. 80/1987ರಲ್ಲಿ ಸಲ್ಲಿಸಿದ ವಾದಪತ್ರದಲ್ಲಿ ಕಂಡುಬಂದಿರುವಂಥವಾಗಿವೆ.

22. ವಾದಿಯು, ಮೂಲದಾವೆ ಸಂ. 80/1987 ಶಾಶ್ವತ ನಿರ್ಬಂಧಕಾಜ್ಞೆ ದಾವೆ ಮಾತ್ರವಾಗಿತ್ತು ಎಂದು ವಾದಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ವ್ಯಾಜ್ಯಕಾರಣ ಪುನರಾವರ್ತಿಸಿದ ಆಧಾರದ ಮೇಲೆ ಎಷ್ಟೇ ಸಂಖ್ಯೆಯ ನಿರ್ಬಂಧಕಾಜ್ಞೆ ದಾವೆಗಳನ್ನು ಸಲ್ಲಿಸಬಹುದು. ಮೊದಲಿನ ಜಫ್ತಿ ಸ್ವತ್ತುಗಳನ್ನು ಮಾರಾಟ ಮಾಡಲು ಪ್ರತಿವಾದಿ ಸಂ.3 ಇವರ ನಂತರ ಹೊರಡಿಸಿದ ನೋಟೀಸುಗಳು ಈ ದಾವೆಗಳನ್ನು ಸಲ್ಲಿಸಲು ಮೊದಲ ವ್ಯಾಜ್ಯಕಾರಣವಾಗಲು ಸಾಧ್ಯವಾಗುವುದಿಲ್ಲ. 3ನೇ ಪ್ರತಿವಾದಿಯ ವಿರುದ್ಧ ಹೊರಡಿಸಿದ ಐತೀರ್ಪುಗಳನ್ನು ಪ್ರಶ್ನಿಸುವ ವ್ಯಾಜ್ಯಕಾರಣವು, 1987ರಲ್ಲಿ ಈಗಾಗಲೇ ಅದೇ ಉದ್ಭವವಾಗಿದೆ. ಪರಿಮಿತಿ ಅಧಿನಿಯಮ ಮಾತ್ರ ಪರಿಹಾರಕ್ಕೆ ಅಡ್ಡಿಯುಂಟು ಮಾಡುತ್ತದೆ. ಹಾಗೂ ಪರಿಹಾರವನ್ನು ರದ್ದುಗೊಳಿಸುವುದಿಲ್ಲ. ಪರಿಮಿತಿ ಅಧಿನಿಯಮವು, ಪರಿಹಾರಕ ಹಾಗೂ ಅಂತಿಮತೆಯ ಅಧಿನಿಯಮವಾಗಿದೆ. ಪ್ರತಿವಾದಿ ಸಂ.1 ಹಾಗೂ 2 ಈ ದಾವಾ ಸ್ವತ್ತುಗಳನ್ನು ಜಫ್ತಿ ಮಾಡುವಾಗ ದಾವೆ ಹೂಡುವ ಹಕ್ಕನ್ನು ಈಗಾಗಲೇ ನೀಡಲಾಗಿದ್ದು, 1987ನೇ ವರ್ಷದಲ್ಲೇ ಬಹಿರಂಗ ಹರಾಜು ನೋಟೀಸನ್ನು ಹೊರಡಿಸುವ ಮೂಲಕ ಅವುಗಳನ್ನು ಮಾರಾಟಕ್ಕೆ ಇಡಲಾಗಿದೆ. ಏಕೆಂದರೆ, ಮೂಲದಾವೆ ಸಂ. 80/1987ನ್ನು ತಪ್ಪಿದ್ದಕ್ಕಾಗಿ ವಜಾಗೊಳಿಸಲಾಗಿತ್ತು. ಘೋಷಣೆಯ ಸಮಗ್ರ ಪರಿಹಾರವನ್ನು ಕೋರಲು ಕಾರಣಕೊಟ್ಟು ಪ್ರತ್ಯೇಕ ದಾವೆಗಳನ್ನು ಹೂಡಲು ಈ ವಾದಿಗೆ ಹೆಚ್ಚಿನ ವ್ಯಾಜ್ಯ ಕಾರಣ ಉದ್ಭವವಾಗುವುದಿಲ್ಲ. ಅದಲ್ಲದೆ, ಈ ದಾವೆಗಳಲ್ಲಿ ಕೋರಲಾದ ಘೋಷಣಾ ಪರಿಹಾರವು, ದಾವಾ ಜಮೀನುಗಳನ್ನು ಜಫ್ತಿಗೆ ಒಳಪಡಿಸಬಾರದು ಹಾಗೂ ಆರು ಐತೀರ್ಪುಗಳ ಮೇರೆಗೆ ಯುಕ್ತ ಮೊತ್ತವನ್ನು ವಸೂಲಿ ಮಾಡುವ ಸಲುವಾಗಿ ಮಾರಾಟ ಮಾಡಬಾರದೆಂಬುದಾಗಿದೆ. ವಾದಿಯು ತನ್ನನ್ನು ದತ್ತುಪಡೆದ ತಾಯಿ–ಪಾರವ್ವನು ಮರಣ ಹೊಂದಿದ ತರುವಾಯ ಸದರಿ ದಾವೆಗಳಿಗೆ ಉತ್ತರಿಸುವ ಬದಲು ವಾದಿಗೆ ವ್ಯವಹರಣೆ ನಡೆಸದೆ ದಾವೆಯನ್ನು ವಜಾಗೊಳಿಸಬೇಕೆಂಬ ಅವಕಾಶ ನೀಡಲಾಗಿದೆ. ವಾದಿಯು 1987ರಲ್ಲಿ ತನ್ನ ತಾಯಿಯೊಂದಿಗೆ ದಾವೆಯನ್ನು ಹೂಡುವ ಮೂಲಕ 1 ಹಾಗೂ 2ನೇ ಸಂಖ್ಯೆಯ ಪ್ರತಿವಾದಿಗಳ ಅಧಿಕಾರವನ್ನು ಪ್ರಶ್ನಿಸಿರುವುದನ್ನು ಗಮನದಲ್ಲಿಟ್ಟುಕೊಂಡು ಈ ಆರು ದಾವೆಗಳ ವ್ಯಾಜ್ಯಕಾರಣವು

1995 ಹಾಗೂ 1996ರಲ್ಲಿ ಮಾತ್ರ ಉದ್ಭವಿಸಿದೆಯೆಂಬುದನ್ನು ಹೇಳಲು ಸಾಧ್ಯವಾಗುವುದಿಲ್ಲ.

23. ***ರುಕ್ಮಾಬಾಯಿ*** ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ಮಾನ್ಯ ಮೂರುಜನ ನ್ಯಾಯಾಧೀಶರ ನಿರ್ಣಯವು ಪರಿಮಿತಿ ಅಧಿನಿಯಮ, 1963ರ 58ನೇ ಅನುಚ್ಛೇದದಲ್ಲಿ ಕಂಡುಬರುವ ಪ್ರತ್ಯೇಕ ಪದಗಳ ಹಿನ್ನೆಲೆಯಲ್ಲಿ ವಿಭಿನ್ನವಾಗಿದ್ದು, ***ಖಾತ್ರಿ ಹೋಟೆಲ್***ನ ಪ್ರಕರಣದ ಕಂಡಿಕೆ ಸಂ. 30ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ಪಷ್ಟ ವ್ಯತ್ಯಾಸವನ್ನು ಮಾಡಿದೆ.

24. ***ಖಾತ್ರಿ ಹೋಟೆಲ್*** ಪ್ರಕರಣದಲ್ಲಿ ಕಂಡುಬರುವ ಸಂಗತಿಗಳ ಪ್ರಕಾರ, ಸ್ಥಿರಾಸ್ತಿಗೆ ಸಂಬಂಧಪಟ್ಟಂತೆ ಘೋಷಣೆ ಹಾಗೂ ಶಾಶ್ವತ ನಿರ್ಬಂಧಕಾಜ್ಞೆಗಾಗಿ, 2000ದ ವರ್ಷದಲ್ಲಿ ವ್ಯಾಜ್ಯಕಾರಣ ಉದ್ಭವವಾಗಿರುವುದನ್ನು ತೋರಿಸುವ ದಾವೆಯನ್ನು ಹೂಡಲಾಗಿತ್ತು. ವಾದಿಗಳು ಹೊಂದಿದ್ದ ದಾವಾ ಜಮೀನಿನ ಸ್ವಾಧೀನದಲ್ಲಿ ಹಸ್ತಕ್ಷೇಪ ಮಾಡಿರುವ ದೆಹಲಿ ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ದಾವೆಯನ್ನು ಹೂಡಲಾಗಿದೆ. 1990ರಲ್ಲಿ ನೀಡಲಾದ ಲಿಖಿತ ಹೇಳಿಕೆಯಲ್ಲಿ ಪ್ರತಿವಾದಿಗಳು ದಾವಾ ಜಮೀನು ಗಯಾನ್ (Gaon) ಸಭಾಕ್ಕೆ ಸೇರಿತ್ತೆಂಬ ನಿರ್ದಿಷ್ಟ ವಾದವನ್ನು ಅವರು ಈಗಾಗಲೇ ಎತ್ತಿದ್ದಾರೆ. ಡೆಲ್ಲಿ ಮುನಿಸಿಪಲ್ ಕಾರ್ಪೋರೇಷನ್ ಅಧಿನಿಯಮದ 507ನೇ ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಅಧಿಸೂಚನೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಭೂಮಿಯನ್ನು ಕೇಂದ್ರ ಸರ್ಕಾರದಲ್ಲಿ ಸ್ವಯಂಚಾಲಿತವಾಗಿ ನಿಹಿತಗೊಳಿಸಲಾಗಿತ್ತು ಹಾಗೂ ಕೇಂದ್ರ ಸರ್ಕಾರವು ದಾವಾ ಜಮೀನನ್ನು ಒಳಗೊಂಡಂತೆ ಸಂಪೂರ್ಣ ಜಮೀನನ್ನು ಹೆಚ್ಚು ನಿರ್ದಿಷ್ಟವಾಗಿ ಡಿ.ಡಿ.ಎ. ಅಧಿನಿಯಮದ 22(1)ನೇ ಪ್ರಕರಣದ ಮೇರೆಗೆ 1974ರಲ್ಲಿ ಹೊರಡಿಸಲಾದ ಅಧಿಸೂಚನೆ ಪ್ರಕಾರ ದೆಹಲಿ ಅಭಿವೃದ್ಧಿ ಪ್ರಾಧಿಕಾರಕ್ಕೆ ವರ್ಗಾಯಿಸಿತ್ತು. ಪ್ರಕರಣದ ಸಂಗತಿಗಳನ್ನು ವಿಶ್ಲೇಷಿಸಿದ ನಂತರ, ಮಾನ್ಯ ಸರ್ವೋಚ್ಚ ನ್ಯಾಯಾಲಯವು, ***ಖಾತ್ರಿ ಹೋಟೆಲ್***ನ ಪ್ರಕರಣದಲ್ಲಿ, ***ದೆಹಲಿ ಮುನಿಸಿಪಲ್ ಕಾರ್ಪೋರೇಷನ್*** ಅಧಿನಿಯಮದ 501ನೇ ಪ್ರಕರಣದ ಮೇರೆಗಿನ ಅಧಿಸೂಚನೆ ಹಾಗೂ ಡಿ.ಡಿ.ಎ. ಅಧಿನಿಯಮದ 22(1)ನೇ ಪ್ರಕರಣದ ಮೇರೆಗಿನ

ಅಧಿಸೂಚನೆಯು ವ್ಯಾಜ್ಯ ಕಾರಣವನ್ನು ಅಧರಿಸಿತ್ತು ಎಂದು ಅಭಿಪ್ರಾಯಪಟ್ಟಿದೆ. ಇದು, 1990ರಲ್ಲಿ ದೆಹಲಿ ಅಭಿವೃದ್ಧಿ ಪ್ರಾಧಿಕಾರವು ಕನಿಷ್ಟಪಕ್ಷ ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಸ್ವೀಕರಿಸಿದ ನಂತರ ವ್ಯಾಜ್ಯಕಾರಣವು ಉದ್ಭವಿಸಿದೆಯೆಂದು, ಆದುದರಿಂದ ಡಿಸೆಂಬರ್ 1990ರಿಂದ ಮೂರು ವರ್ಷಗಳನ್ನು ಪರಿಗಣಿಸಲಾಗಿದೆಯೆಂದು ಅಭಿಪ್ರಾಯಪಟ್ಟಿದೆ. ಆದ್ದರಿಂದ ಇದು ನಿರ್ದಿಷ್ಟವಾಗಿ, 2000ದ ವರ್ಷದಲ್ಲಿ ಸಲ್ಲಿಸಲಾದ ದಾವೆಯನ್ನು ಕಾಲದೊಳಗೆ ನಿಷೇಧಿಸಲಾಗಿತ್ತೆಂದು ಅಭಿಪ್ರಾಯಪಟ್ಟಿದೆ.

25. ಪ್ರಸ್ತುತ ಪ್ರಕರಣದಲ್ಲಿಯೂ ಸಹ ಪ್ರತಿವಾದಿಗಳು, ದಾವೆಯನ್ನು ನಿರ್ವಹಿಸಿಲ್ಲವೆಂಬ ಹಾಗೂ ಪ್ರತಿವಾದಿಗಳು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡಲು ದಾವಾ ಅನುಸೂಚಿ ಸ್ವತ್ತುಗಳನ್ನು ತರುವ ಮೂಲಕ ಮೊತ್ತವನ್ನು ವಸೂಲಿ ಮಾಡಲು ಹಕ್ಕುಳ್ಳವರಾಗಿರುವರೆಂಬ ನಿರ್ದಿಷ್ಟ ನಿಲುವನ್ನು ತಳೆದಿದ್ದಾರೆ. ದಾವೆಯನ್ನು ಸಲ್ಲಿಸಿರುವ ವಾದಿಯನ್ನು ತಪ್ಪಿನಿಂದಾಗಿ ವಜಾಗೊಳಿಸಲಾಗುತ್ತದೆ. ಅಧಿವಿಚಾರಣಾ ನ್ಯಾಯಾಲಯದ ಮುಂದೆ ವಾದಿಗಳು ಹೂಡಿದ ಮೊದಲಿನ ದಾವೆ ಕುರಿತು ತುಟಿ ಬಿಚ್ಚಿರುವುದಿಲ್ಲ. 1 ಹಾಗೂ 2ನೇ ಸಂಖ್ಯೆಯ ಪ್ರತಿವಾದಿಗಳು ಸ್ವತ್ತುಗಳನ್ನು ಮಾರಾಟ ಮಾಡಲು ನೋಟೀಸುಗಳನ್ನು ಹೊರಡಿಸಿದ ನಂತರ, 1987ರಲ್ಲಿ ಮತ್ತೆ ಮಾಡಲಾದ ಈ ಸ್ವತ್ತುಗಳ ಜಪ್ತಿಯ ಆಧಾರದ ಮೇಲೆ ಮೊದಲು ಏನನ್ನು ಮಾಡಲಾಗಿತ್ತೆಂಬುದು ಪುನರಾವರ್ತಿತವಾಗಿದೆ. ವಾದಿಯು, ದಾವಾ ಸ್ವತ್ತುಗಳ ಸ್ವಾಧೀನತೆ ಹೊಂದಿರುವ ನಿಜವಾದ ಮಾಲೀಕನಾಗಿದ್ದಾನೆಂದು ಅಭಿಪ್ರಾಯಪಟ್ಟಿರುವ ಕಾರಣದಿಂದ ಪ್ರತಿವಾದಿಗಳು ಸಿವಿಲ್ ಪ್ರಕ್ರಿಯಾ ಸಂಹಿತೆಯ 33ನೇ ನಿಯಮದ 41ನೇ ಆದೇಶದ ಮೇರೆಗೆ ಪ್ರಶ್ನಿತ ತೀರ್ಪುಗಳನ್ನು ಇನ್ನೂ ಸಮರ್ಥಿಸಬಹುದಾಗಿದೆ.

26. ಈ ವಿಷಯವನ್ನು, ದೃಷ್ಟಿಯಲ್ಲಿಟ್ಟುಕೊಂಡು, ಅಧೀನ ನ್ಯಾಯಾಲಯಗಳು, ಪರಿಮಿತಿ ಅಧಿನಿಯಮ, 1963ರ 58ನೇ ಅನುಚ್ಛೇದದ ಪ್ರಕಾರ ಪರಿಮಿತಿಯ

ಆಧಾರಗಳ ಮೇಲೆ ದಾವೆಗಳನ್ನು ವಜಾಗೊಳಿಸಿರುವುದನ್ನು ಸಮರ್ಥಿಸಿಕೊಂಡಿವೆ. 1995 ಹಾಗೂ 1996ರಲ್ಲಿ ವಾದಿಯು ಸಲ್ಲಿಸಿದ ಆರು ವಾದಪತ್ರಗಳಲ್ಲಿ ದೃಢವಾಗಿ ಹೇಳಲಾದಂಥ ವ್ಯಾಜ್ಯ ಕಾರಣವನ್ನು ಸದರಿ ಸ್ವತ್ತುಗಳನ್ನು ಜಪ್ತಿ ಮಾಡುವಾಗ ಹಾಗೂ ಬಹಿರಂಗ ಹರಾಜು ಕೈಗೊಳ್ಳಲು ಉದ್ದೇಶಿಸಿ 3ನೇ ಸಂಖ್ಯೆಯ ಪ್ರತಿವಾದಿಗೆ ನೋಟೀಸುಗಳನ್ನು ಹೊರಡಿಸುವಾಗ, 1986 ಹಾಗೂ 1987ರಲ್ಲಿ ವ್ಯಾಜ್ಯಕಾರಣವು ಉದ್ಭವಿಸಿದ್ದರಿಂದ ಈ ದಾವೆಗಳಿಗೆ ವ್ಯಾಜ್ಯ ಕಾರಣವೆಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಸದರಿ ಜಪ್ತಿಯು 1995ರ ಅವಧಿಯವರೆಗೆ ಎಲ್ಲಾ ವಾಸ್ತವಿಕ ಉದ್ದೇಶಗಳಿಗೆ ಕಾನೂನಿನಲ್ಲಿ ಮುಂದುವರಿದಿದೆ. ಆದ್ದರಿಂದ ವಾದಿಗೆ ದಾವೆ ಹೂಡುವ ಹಕ್ಕು 1987ರಲ್ಲಿ ಮೊದಲು ಪ್ರಾಪ್ತವಾಗಿದೆ. ಬಹಿರಂಗ ಹರಾಜಿಗೆ ದಾವಾ ಸ್ವತ್ತುಗಳನ್ನು ತರಲು ಪ್ರಯತ್ನಿಸಿದ ಪ್ರತಿವಾದಿ ಸಂ.1 ಹಾಗೂ 2 ಮತ್ತು ಅವರ ವಸೂಲಾತಿ ಅಧಿಕಾರಿಗಳು ಹಾಗೂ ಮಾರಾಟ ಅಧಿಕಾರಿಗಳು ಜಪ್ತಿಯನ್ನು ಕೈಗೊಂಡಾಗ 1987ನೇ ವರ್ಷದಲ್ಲೇ ವಾದಿಯ ಹಕ್ಕಿನ ಅತಿಕ್ರಮಣ ಪ್ರಾರಂಭಗೊಂಡಿದೆ. ಆದ್ದರಿಂದ ದಾವೆಯನ್ನು ಸಲ್ಲಿಸಲು ವಾದಿಯ ಹಕ್ಕು 1995ರಲ್ಲಿ ಮೊದಲ ಬಾರಿಗೆ ಉದ್ಭವವಾಗಿದೆಯೆಂದು ಅಭಿಪ್ರಾಯಪಡಲು ಸಾಧ್ಯವಾಗುವುದಿಲ್ಲ. ಮತ್ತೊಂದು ಕಡೆಯಲ್ಲಿ, ವಾದಿಯ ಹಕ್ಕನ್ನು ಸ್ವತ್ತುಗಳನ್ನು ಜಪ್ತಿ ಮಾಡುವ ಮೂಲಕ ಹಾಗೂ ಪ್ರತ್ಯೇಕ ನೋಟೀಸುಗಳನ್ನು ಹೊರಡಿಸುವ ಮೂಲಕ 1987ರಷ್ಟು ಹಿಂದೆಯೇ ಅತಿಕ್ರಮಿಸಲಾಗಿದೆ. ವಾದಪತ್ರದ ಜಾಣ್ಮೆಯ ಕರಡು ರಚನೆಯು, 1987ರಲ್ಲಿ ಹಿಂದೆ ಉದ್ಭವವಾಗಿರುವ ವ್ಯಾಜ್ಯಕಾರಣ ಉದ್ಭವವಾಗಲು ಸಾಧ್ಯವಾಗುವುದಿಲ್ಲ. ಆದ್ದರಿಂದ, 1 ಹಾಗೂ 2ನೇ ಸಂಖ್ಯೆಯ ಕಾನೂನಿನ ಗಣನೀಯ ಪ್ರಶ್ನೆಗಳಿಗೆ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

27. **ಪರಿಶೀಲನಾಂಶ 3**: ಪರಿಮಿತಿ ಹಾಗೂ ಅಧಿವಿಚಾರಣಾ ನ್ಯಾಯಾಲಯ ನೀಡಲಾದಂಥ ವ್ಯಾಜ್ಯಕಾರಣಕ್ಕೆ ಸಂಬಂಧಪಟ್ಟಂತೆ ನಿರ್ಣಯಗಳನ್ನು ಸರಿಯಾಗಿ ಪರಿಗಣಿಸುವ ಮೂಲಕ ಹಸ್ತಕ್ಷೇಪ ಮಾಡಲು ಯಾವುದೇ ಒಳ್ಳೆಯ ಆಧಾರಗಳನ್ನು ರೂಪಿಸಿಲ್ಲ ಹಾಗೂ ಸಿವಿಲ್ ಪ್ರಕ್ರಿಯಾ ಸಂಹಿತೆಯ 96ನೇ ಪ್ರಕರಣದ ಮೇರೆಗೆ

ಮೊದಲ ಅಪೀಲು ನ್ಯಾಯಾಲಯವು ಸಕಾರಾತ್ಮವಾಗಿದೆ. ತದನುಸಾರವಾಗಿ ಅಪೀಲುಗಳನ್ನು ವಜಾಗೊಳಿಸಲಾಗಿದೆ.

## ಆದೇಶ

ಸಿವಿಲ್ ಪ್ರಕ್ರಿಯಾ ಸಂಹಿತೆಯ 100ನೇ ಪ್ರಕರಣದ ಮೇರೆಗೆ ಸಲ್ಲಿಸಲಾದ ಅಪೀಲುಗಳನ್ನು ವೆಚ್ಚಗಳೊಂದಿಗೆ ವಜಾ ಮಾಡಲಾಗಿದೆ. ತತ್ಪರಿಣಾಮವಾಗಿ, ಅಧಿವಿಚಾರಣಾ ನ್ಯಾಯಾಲಯ ಹಾಗೂ ಮೊದಲ ಅಪೀಲು ನ್ಯಾಯಾಲಯಗಳ ಸಾಮಾನ್ಯ ತೀರ್ಪನ್ನು ಎತ್ತಿ ಹಿಡಿಯಲಾಗಿದೆ.